
||ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯಃ ||



Sr	Date	Remarks	
1	06/03/2012	Typing Started on	By Pavana Shreesha BS / HKS
2	18/05/2012	Typing Ended on	By Pavana Shreesha BS /HKS
3		First Proof Reading	
4		First proof Correction	
5		Second proof correction	

|| ಶ್ರೀ ಹಯವದನ ರಂಗವಿಠ್ಠಲ ಗೋಪೀನಾಥೋ ವಿಜಯತೇ ||

Blessed by Lord and with His divine grace, we are pleased to publish this Magnanimous Work of Sri Raghavendra Theertha. It is a humble effort to make available this Great work to Sadhakas who are interested in the noble path of propagating Acharya Madhwa's Philosophy.

With great humility, we solicit the readers to bring to our notice any inadvertant typographical mistakes that could have crept in, despite great care. We would be pleased to incorporate such corrections in the next versions. Users can contact us, for editable version, to facilitate any value additions.

Contact: H K SRINIVASA RAO, N0 26, 2ND FLOOR, 15TH CROSS, NEAR VIDHYAPEETA CIRCLE, ASHOKANAGAR, BANGALORE 560050. PH NO. 26615951, 9901971176, 8095551774, Email : **srkarc@gmail.com**

ಕೃತಜ್ಞತೆಗಳು



ಜನ್ಮಾಂತರದ ಸುಕೃತದ ಫಲವಾಗಿ ಮಧ್ವಮತದಲ್ಲಿ ಜನಿಸಲು, ಪ್ರೇಮಮೂರ್ತಿಗಳಾಗಿ ನನ್ನ ಅಸ್ತಿತ್ವಕ್ಕೆ ಕಾರಣರಾದ, ಈ ಸಾಧನೆಗೆ ಅವಕಾಶಮಾಡಿದ, ನನ್ನ ಪೂಜ್ಯ ಮಾತಾ ಪಿತೃಗಳಾದ, ದಿವಂಗತರಾದ ಲಲಿತಮ್ಮ ಮತ್ತು ಕೃಷ್ಣರಾವ್ ಹೆಚ್ ಆರ್ ಅವರ ಸವಿ ನೆನಪಿನಲ್ಲಿ ಈ "ಸರ್ವಮೂಲ - ಜ್ಞಾನಯಜ್ಞ"

''ಮಾತೃದೇವೋ ಭವ-ಪಿತೃದೇವೋಭವ-ಆಚಾರ್ಯದೇವೋಭವ''

1. ಸಂಸ್ಕೃತದಲ್ಲಿರುವ ಅನುನಾಸಿಕದ ಸ್ಪಷ್ಟವಾದ ವೈವಿಧ್ಯತೆಯು, ಕನ್ನಡ ಭಾಷೆಯಲ್ಲಿಯೂ ಇರುವಾಗ, ಅದರ ಜ್ಞಾನದ ಗಂಧವೇ ಇಲ್ಲದವರಂತೆ, ಕನ್ನಡಿಗರು ಇದನ್ನು ಕಡೆಗಣಿಸಿರುವುದು ಏಕೋ ತಿಳಿಯದಾಗಿದೆ. ಸರಿಯಾದ ಉಚ್ಚಾರಣೆಗಾಗಿ, ಸರಿಯಾದ ಅನುಸ್ವಾರಗಳು ಅವಶ್ಯಕ. ಆದ್ದರಿಂದ, ಶ್ರಮವಹಿಸಿ, ಸರಿಯಾದ ಅನುನಾಸಿಕ, ಅನುಸ್ವಾರಗಳನ್ನು ಬಳಸಲಾಗಿದೆ. ಓದುಗರು ಇದನ್ನು ಗಮನಿಸಿ ಮನ್ನಿಸಬೇಕಾಗಿ ಪ್ರಾರ್ಥಿಸಲಾಗಿದೆ.
2. ಗ್ರಂಥ ಋಣ: ಶ್ರೀ ರಾಜಾ ಶ್ರೀ ಗುರಾರಾಜಾಚಾರ್ಯರ ಶ್ರೀಮನ್ಮಹಾಭಾರತಭಾವಸಂಗ್ರಹ

ಶ್ರೀಮನ್ಮಹಾಭಾರತತಾತಾತ್ಪರ್ಯನಿರ್ಣಯ ಭಾವಸಙ್ಗ್ರಹ

ಯೋऽಗ್ರೇऽಭೂದ್ವಿಶ್ವಗರ್ಭಃ ಸುಖನಿಧಿರಮಿತೈರ್ವಾಸುದೇವದಿರೂಪೈಃ
ಕ್ರೀಡನ್ ದೇವೈರಜಾದ್ಯೈರಗಣಿತಸುಗುಣೋ ನಿತ್ಯನೀಚೋಚ್ಚಭಾವೈಃ ।
ವೇದೈರ್ವೇದ್ಯೋऽಸ್ತದೋಷೋऽಪ್ಯಸುರಜನಮನೋ ಮೋಹಯನ್ ಮರ್ತ್ಯವೃತ್ಯಾ
ಭಕ್ತಾನಾಂ ಮುಕ್ತಿದಾತಾ ದ್ವಿಷದಸುಖಕರಃ ಪಾತು ಸೋऽಸ್ಮಾನ್ ಮಹೇಶಃ ||01||

ಶ್ರೀನಾರಾಯಣನು ಸೃಷ್ಟಿಗೆ ಮೊದಲು ಸಕಲ ಜಗತ್ತನ್ನೂ ತನ್ನ ಉದರದಲ್ಲಿಟ್ಟುಕೊಂಡು ಆನಂದಪೂರ್ಣನಾಗಿದ್ದನು. ಅನಂತ ಕಲ್ಯಾಣಗುಣಗಳಿಂದ ಯುಕ್ತನಾದ ಶ್ರೀಹರಿಯು ಸರ್ವದಾ ತಾರತಮ್ಯಭಾವಯುಕ್ತರಾದ ಬ್ರಹ್ಮರುದ್ರೇಂದ್ರಾದಿ ಸಮಸ್ತ ದೇವತೆಗಳಿಂದ ಕೂಡಿ ಅನಂತವಾದ ತನ್ನ ವಾಸುದೇವಾದಿ ರೂಪಗಳಿಂದ ವಿಹರಿಸುತ್ತಿದ್ದನು. ವೇದಗಳಿಂದ ಮಾತ್ರ ತಿಳಿಯಲು ಯೋಗ್ಯನಾದ ಅವನು ದೋಷದೂರನಾಗಿದ್ದರು ಸಹ ಮಾನವರಂತೆ ದೈತ್ಯಜನರ ಮನಸ್ಸನ್ನು ಮೋಹಗೊಳಿಸುತ್ತಾ, ತನ್ನ ಭಕ್ತರಾದವರಿಗೆ ಸ್ವರೂಪಾನಂದಾವಿರ್ಭಾವರೂಪ ಮೋಕ್ಷವನ್ನು ಕೊಟ್ಟು ತನ್ನ ದ್ವೇಷಿಗಳಾದ ಅಸುರರಿಗೆ ಅಂಧತಾಮಿಸ್ರಪ್ರದನಾದ, ಸರ್ವೋತ್ತಮನಾದ ಶ್ರೀಮನ್ನಾರಾಯಣನು ನಮ್ಮನ್ನು ಕಾಪಾಡಲಿ.

ಸದ್ಗ್ರನ್ಥಾನಾಂ ಸಮೂಹೇ ಜಗತಿ ವಿಲುಲಿತೇ ಯೇನ ತದ್ಭಾವಮುಚ್ಚೈಃ
ವಕ್ತುಂ ಮಧ್ವೋ ನಿಯುಕ್ತೋ ವ್ಯಧಿತ ಸುವಚಸಾಮುದ್ಧೃತಿಂ ಭಾರತಸ್ಯ ।
ದೇವೋತ್ಕೃಷ್ಟಸ್ಯ ವಿಷ್ಣೋಃ ಪರಮಪುರುಷತಾಂ ತಾರತಮ್ಯಂ ಸುರಾಣಾಂ
ವಾಯೋರ್ಜೀವೋತ್ತಮತ್ವಾದಿಕಮಪಿ ವದತಾಂ ವ್ಯಾಸಮೀಡೇ ತಮೀಶಮ್ || 02 ||

ಮಹಾಭಾರತಾದಿ ಸದ್ಗ್ರಂಥಗಳು ಅಪಪಾಠಾದಿಗಳಿಂದ ಜಗತ್ತನಿನಲ್ಲಿ ವ್ಯಾಕುಲಿವಾಗಲು, ಸಾಕ್ಷಾತ್ ನಾರಾಯಣದೇವರಿಂದ ಆ ಮಹಾಭಾರತಾದಿ ಗ್ರಂಥಗಳ ಭಾವವನ್ನು ಪ್ರಮಾಣಪೂರ್ವಕವಾಗಿ, ಸ್ಪಷ್ಟವಾಗಿ ನಿರ್ಣಯಮಾಡಿ ನಿರೂಪಿಸಲು ಶ್ರೀಮನ್ಮಧ್ವಾಚಾರ್ಯರು ನಿಯುಕ್ತರಾದರು. ಅವರು ಶ್ರೀವೇದವ್ಯಾಸದೇವರ ಅನುಗ್ರಹದಿಂದ ದೇವತಾಸರ್ವಾಭೌಮನಾದ ಶ್ರೀ ವಿಷ್ಣುವಿನ ಸರ್ವೋತ್ತಮತ್ವ, ದೇವತೆಗಳ ತಾರತಮ್ಯ ಪ್ರಕಾರ, ಶ್ರೀವಾಯುದೇವರ ಜೀವೋತ್ತಮತ್ವ, ಅತಿರೋಹಿತ ವಿಜ್ಞಾನತ್ವಾದಿ ವಿಚಾರಗಳನ್ನು ಸಹ ನಿರೂಪಿಸಿರುವ, ಸಕಲ ಶಾಸ್ತ್ರಗಳ ವಾಕ್ಯೋದ್ಧಾರ ಪೂರ್ವಕವಾಗಿ "ಮಹಾಭಾರತ ತಾತ್ಪರ್ಯ ನಿರ್ಣಯ" ವೆಂಬ ಗ್ರಂಥವನ್ನು ರಚಿಸಿದರು. ಅಂಥ ಮಹಾಭಾರತ ಗ್ರಂಥವನ್ನು ರಚಿಸಿದ, ಸಕಲರಿಗೂ ಪ್ರಭುಗಳಾದ ಶ್ರೀವೇದವ್ಯಾಸದೇವರನ್ನು ಸ್ತುತಿಸುತ್ತೇನ.

ಅದೌ ರೂಪಚತುಷ್ಟಯೀ ಸೃಜತಿ ಯೋ ದೇವಾನ್ ಪುರಾನುಕ್ರಮಾತ್
ಬ್ರಹ್ಮಾಣ್ಡಂ ಪುರಮಬ್ಜಜಾದಿವಿಬುಧಾನ್ ಸೃಷ್ಟ್ವಾ ಹರತ್ಯನ್ತತಃ |
ಸೃಷ್ಟ್ವಾ ಪೂರ್ವವದಸ್ಯ ಸರ್ವಜಗತೋ ಮತ್ಸ್ಯಾದಿರೂಪೋಽಭವ-
ದ್ರಾಮೋಽಭೂದನುಜಾನ್ವಿತೋ ದಶರಥಾತ್ ಪಾಯಾತ್ಸ ನಃ ಶ್ರೀಪತಿಃ || 03 ||

ಸೃಷ್ಟಿಗೆ ಮೊದಲು ವಾಸುದೇವ ಸಂಕರ್ಷಣ, ಪ್ರದ್ಯುಮ್ನ ಅನಿರುದ್ಧನೆಂಬ ನಾಲ್ಕು ರೂಪಯುಕ್ತನಾದ ಶ್ರೀಮನ್ನಾರಾಯಣನು ಪೂರ್ವಕಲ್ಪದ ಕ್ರಮವನ್ನು ಅನುಸರಿಸಿ, ಸೂಕ್ಷ್ಮರೂಪದಿಂದ ಬ್ರಹ್ಮಾದಿದೇವತೆಗಳನ್ನು ಬ್ರಹ್ಮಾಣ್ಡವನ್ನೂ ಸೃಷ್ಟಿಮಾಡಿ, ಅನಂತರ ಕಮಲೋದ್ಭವನಾದ ಶ್ರೀಬ್ರಹ್ಮದೇವರೇ ಮೊದಲಾದ ದೇವತೆಗಳನ್ನೂ ಸೃಜಿಸಿ, ಕೊನೆಗೆ ಪ್ರಳಯಕಾಲದಲ್ಲಿ ಸರ್ವವನ್ನೂ ನಾಶಮಾಡಿಸುವನು. ಮತ್ತೆ ಮೊದಲಿನಂತೆ ಈ ಸಕಲ ಜಗತ್ತಿನ ಸೃಷ್ಟಿಕರ್ತನಾದ ಶ್ರೀನಾರಾಯಣನು ಮತ್ಸ್ಯ-ಕೂರ್ಮಾದಿ ಅನೇಕರೂಪನೂ, ದಶರಥನ ದಶೆಯಿಂದ ಲಕ್ಷ್ಮಣಾದಿ ಸಹೋದರರಿಂದೊಡಗೂಡಿ ಶ್ರೀರಾಮಚಂದ್ರನೆಂಬ ಹೆಸರಿಂದ ಅವತಾರ ಮಾಡಿದನು. ಅಂಥ ಶ್ರೀಲಕ್ಷ್ಮೀಪತಿಯು ನಮ್ಮನ್ನು ಕಾಪಾಡಲಿ.

ಯದ್ವೃದ್ಧಿರ್ಜನಮೋಹಿನೀ ಮುದಮಿತಾ ಯದ್ದರ್ಶನಾತ್ಸಜ್ಜನಾಃ
ಯೇನಾರ್ಥಿಪ್ರಿಯಕಾರಿಣಾ ನಿಶಚರೀಹನ್ತ್ರಾ ಕೃತೂ ರಕ್ಷಿತಃ |
ಯೋಽಹಲ್ಯಾಂ ಸಪತಿಂ ವ್ಯಧಾದ್ಧರಧನುರ್ಭಙ್ಕ್ತ್ವಾಽವಹಜ್ಜಾನಕೀಂ
ಜೇತಾ ವರ್ತ್ಮನಿ ಭಾರ್ಗವಸ್ಯ ನಗರೀಂ ರಾಮೋ ಗತೋಽವ್ಯಾತ್ಸ ಮಾಮ್ || 04 ||

ಶ್ರೀರಾಮನು ಶುಕ್ಲಪಕ್ಷದ ಚಂದ್ರಮನಂತೆ ಅಭಿವೃದ್ಧನಾದುದು ಕೇವಲ ಅಜ್ಞ ಜನರಿಗೆ ಅನ್ಯಥಾ ಜ್ಞಾನವನ್ನು ಹುಟ್ಟಿಸಲೆಂದೇ ವಿನಃ, ಮಹತೋಮಹಿಮನಾದ ಆ ಪ್ರಭುವಿಗೆ ವೃದ್ಧಿಹ್ರಾಸಾದಿಗಳಿಲ್ಲ. ಲೋಕದ ಸಕಲ ಸಜ್ಜನರೂ ಶ್ರೀರಾಮನ ದರ್ಶನ ಮಾತ್ರದಿಂದ ಅಮಂದಾನಂದತುಂದಿಲರಾಗುತ್ತಿದ್ದರು. ವಿಶ್ವಾಮಿತ್ರಋಷಿಯು ಯಜ್ಞರಕ್ಷಣೆಗಾಗಿ ಶ್ರೀರಾಮನನ್ನು ಕಳುಹಿಸಬೇಕೆಂದು ಬೇಡಲು, ತಂದೆಯ ಅಪ್ಪಣೆಯಂತೆ ಲಕ್ಷ್ಮಣನೊಡನೆ ವಿಶ್ವಾಮಿತ್ರನ ಜೊತೆಗೆ ಹೊರಟು ಯಜ್ಞವನ್ನು ರಕ್ಷಿಸಿದನು. ಸೀತಾವಿವಾಹ ವಿಚಾರವರಿತು ಗುರುಗಳೊಡನೆ ಹೊರಟ ಶ್ರೀರಾಮನು, ಹಿಂದೆ ಇಂದ್ರದೇವರು ಗೌತಮರ ವೇಷಧರಿಸಿ ಮೋಸದಿಂದ ಬಲಾತ್ಕಾರವಾಗಿ ಅಹಲ್ಯಾದೇವಿಯೊಡನೆ ವಿಹರಿಸಿದ, ವಿಚಾರವನ್ನು ಜ್ಞಾನದೃಷ್ಟಿಯಿಂದ ತಿಳಿದು, ಕುಪಿತರಾದ ಗೌತಮರು ಕಲ್ಲಾಗೆಂದು ಶಾಪಕೊಡಲು, ಅಹಲ್ಯಾದೇವಿಯು ಪತಿಶಾಪದಿಂದ ಬಹುಕಾಲದಿಂದ ಶಿಲಾರೂಪಳಾಗಿ ಕಷ್ಟಪಡುತ್ತಿರಲು, ಶ್ರೀರಾಮನು ತನ್ನ ದರ್ಶನಮಾತ್ರದಿಂದ ಅಹಲ್ಯೆಯ ಶಾಪವಿಮೋಚನೆಮಾಡಿ, ಮತೆ ಅವಳನ್ನು ಮಾನವಳನ್ನಾಗಿಮಾಡಿ, ದೋಷರಹಿತಳಾದ, ಸಾಧ್ವಿಯಾದ, ಅವಳನ್ನು ಮತ್ತೆ ಗೌತಮರೊಡನೆ ಸೇರಿಸಿ, ಅವರು ಸುಖದಿಂದಿರುವಂತೆ

ಮಾಡಿದನು. ಜನಕರಾಯನ ಪಟ್ಟಣದಲ್ಲಿ ಸ್ವಯಂವರದ ಪಣವಾಗಿದ್ದ ಶಿವಧನುಷ್ಯವನ್ನು ಲೀಲಾಜಾಲವಾಗಿ ಮುರಿದು, ಜಾನಕಿಯನ್ನು ವಿವಾಹವಾದನು. ನಂತರ ತಂದೆತಾಯಿಯರು, ಬಂಧು-ಬಾಂದವರೊಡನೆ ಅಯೋಧ್ಯೆಗೆ ಹೊರಟು ಪ್ರಯಾಣ ಬೆಳೆಸುತ್ತಿರುವಾಗ ಮಾರ್ಗಮಧ್ಯದಲ್ಲಿ ಬಂದ, ಪರಶುರಾಮರು ವೈಷ್ಣವಧನುಸ್ಸನ್ನಿತ್ತು ಇದನ್ನೂ ಹೆದೆಯೇರಿಸು ನೋಡೋಣವೆನಲು, ಸುಲಭವಾಗಿ ಹೆದೆಯೇರಿಸಿ, ಪರಶುರಾಮರನ್ನು ಜಯಿಸಿ, ಅಯೋಧ್ಯೆಗೆ ಬಂದು, ಅಲ್ಲಿ ಪತ್ನಿಯಾದ ಸೀತಾದೇವಿಯೊಡನೆ ಬಹುಕಾಲ ವಿಹರಿಸುತ್ತಾ ಸುಖವಾಗಿದ್ದನು. ಇಂಥ ಶ್ರೀರಾಮಚಂದ್ರನು ನನ್ನನ್ನು ಕಾಪಾಡಲಿ.

> ತ್ಯಕ್ತ್ವಾ ರಾಜ್ಯಮಿತೋ ವನಂ ವಚನತೋ ಮಾತುಶ್ಚ ಕಾಕಾಕ್ಷಿಗಂ
> ದೈತ್ಯಂ ವ್ಯಸ್ಯ ವಿಕರ್ಣಘೋಣಖಚರೀಬನ್ಧೂನ್ ಖರಾದೀನ್ ಖಲಾನ್ |
> ಮಾರೀಚಂ ಚ ನಿಹತ್ಯ ರಾವಣಹೃತಾಂ ಸೀತಾಂ ವಿಚಿನ್ವನ್ನಿವ
> ಪ್ರಾಪ್ತೋ ವಾಯುಸುತೇನ ಸೂರ್ಯಜಯುಜಾ ರಾಮೋऽವತಾದ್ವನ್ವಿತಃ || 05 ||

ತಾಯಿಯಾದ ಕೈಕೇಯಿದೇವಿಯ ವಚನದಂತೆ ಪಿತೃವಾಕ್ಯಪರಿಪಾಲನಮಾಡಲು ತನ್ನ ರಾಜ್ಯವನ್ನು ತ್ಯಜಿಸಿದವನಾಗಿ ಸೀತಾಲಕ್ಷ್ಮಣರ ಜೊತೆಗೂಡಿ ಅರಣ್ಯಕ್ಕೆ ಬಂದನು. ಅಲ್ಲಿ ಕಾಗೆಯು ಸೀತಾಮಾತೆಗೆ ಮಾಡಲೆತ್ನಿಸಿದ ಅಪಚಾರಕ್ಕಾಗಿ, ಕಾಗೆಯ ರೂಪದಲ್ಲಿದ್ದ ಜಯಂತನ ಕಣ್ಣಿನಲ್ಲಿದ್ದ (ತುರಂಗನೆಂಬ ದೈತ್ಯನನ್ನು) ಕಾಕಾಸುರನನ್ನು ಸಂಹಾರ ಮಾಡಿ, ತನ್ನನ್ನು ಕಾಮಿಸಬಂದ ರಾವಣನ ತಂಗಿಯಾದ ಶೂರ್ಪಣಖಿಯೆಂಬ ರಾಕ್ಷಸಿಯ ಕಿವಿ-ಮೂಗುಗಳನ್ನು ಲಕ್ಷ್ಮಣನಿಂದ ಛೇದನಮಾಡಿಸಿ, ಅವಳ ಬಂಧುಗಳಾದ ದುಷ್ಟರಾದ ಖರ-ದೂಷಣ-ತ್ರಿಶಿರಾದಿಗಳನ್ನು, ಸಮುದ್ರಕ್ಕೆಸೆದು ಸಂಹಾರಮಾಡಿ; ರಾಮಚಂದ್ರನು, ತನ್ನ ತಂಗಿಯಾದ ಶೂರ್ಪಣಕೆಯ ಅಪಮಾನ ಮಾಡಿದನೆಂಬ ಕೋಪದಿಂದ ರಾವಣನು ಸೀತಾಕಕೃತಿಯನ್ನು ಅಪಹರಿಸಿಕೊಂಡು ಹೋಗಲು, ಪ್ರಿಯಪತ್ನಿಯ ವಿರಹದಿಂದ ಅವಳನ್ನು ಹುಡುಕುವಂತೆ ನಟಿಸುತ್ತಾ, ಕಷ್ಕಿಂಧೆಯಲ್ಲಿ ಸೂರ್ಯಪುತ್ರನಾದ ಸುಗ್ರೀವನಿಂದ ಸಹಿತನಾಗಿ, ತನ್ನ ದರ್ಶನಕ್ಕಾಗಿ ಬಂದ ಶ್ರೀವಾಯುಸುತನಾದ ಹನುಮಂತನೊಡನೆ ಸೇರಿ, ಅವರಿಂದ ನಮಸ್ಕೃತನಾದ ಶ್ರೀರಾಮಚಂದ್ರನು ನಮ್ಮನ್ನು ಕಾಪಾಡಲಿ.

> ಸುಗ್ರೀವೇಣ ಸಖಿತ್ವಮಾಪ್ಯ ಶಪಥಂ ಕೃತ್ವಾ ವಧೇ ವಾಲಿನಃ
> ತಾಲಾನ್ ಸಪ್ತ ವಿಭಿದ್ಯ ವಾಲಿನಿಧನಂ ಕೃತ್ವ ಸ್ವರಾಜ್ಯೇ ಸ್ಥಿತಮ್ |
> ಮಾರ್ತಾಣ್ಡಿಂ ಚ ವಿಧಾಯ ಮಾರುತಿಯುಜಾ ಯಾಮ್ಯಾಂ ದಿಶಂ ಗಚ್ಛತಾ
> ಸೀತಾನ್ವೇಷಣಮಿಚ್ಛತಾಬ್ಧಿತರಣೇ ರಾಮೋऽವತಾತ್ ಸಂಸ್ತುತಃ || 06 ||

ಶ್ರೀರಾಮಚಂದ್ರನು ಸುಗ್ರೀವನ ಮಿತ್ರತ್ವವನ್ನು ಪಡೆದು, ವಾಲಿಯನ್ನು ಸಂಹರಿಸುವುದಾಗಿ ಪ್ರತಿಜ್ಞೆಮಾಡಿ, ವಾಲಿಯನ್ನು ಸಂಹಾರಮಾಡಿ, ಕಪಿರಾಜ್ಯದಲ್ಲಿ ಸೂರ್ಯಪುತ್ರನಾದ ಸುಗ್ರೀವನನ್ನು ಸಂಸ್ಥಾಪಿಸಿದನು. ಅನಂತರ ಸುಗ್ರೀವನ ಅಪ್ಪಣೆಯಂತೆ ಸಕಲ ವಾನರರೂ ಶ್ರೀಹನುಮಂತ ದೇವರಿಂದ ಕೂಡಿ, ಸೀತಾದೇವಿಯನ್ನು ಹುಡುಕಬಯಸಿ, ದಕ್ಷಿಣ ದಿಕ್ಕಿಗೆ ಪ್ರಯಾಣ ಬೆಳೆಸಿ, ಅಲ್ಲಿ ಅಗಾಧವಾದ ಸಮುದ್ರವನ್ನು ಕಂಡು, ಸಮುದ್ರಲಂಘನ ಸಮಯದಲ್ಲಿ ಶ್ರೀರಾಮಚಂದ್ರದೇವರನ್ನು ಬಹು ಭಕ್ತಿಪೂರ್ವಕವಾಗಿ ಸ್ತೋತ್ರಮಾಡಿದರು. ಹೀಗೆ ಕಪಿವೀರರಿಂದ ಸಂಸ್ತುತನಾದ ಶ್ರೀರಾಮಚಂದ್ರಪ್ರಭುವು ನಮ್ಮನ್ನು ರಕ್ಷಿಸಲಿ.

ಯಸ್ಯ ಶ್ರೀಹನುಮಾನನುಗ್ರಹಬಲಾತ್ ತೀರ್ಣಾಂಬುಧಿರ್ಲೀಲಯಾ
ಲಙ್ಕಾಂ ಪ್ರಾಪ್ಯ ನಿಶಾಮ್ಯ ರಾಮದಯಿತಾಂ ಭಙ್ಕ್ತ್ವಾ ವನಂ ರಾಕ್ಷಸಾನ್ ।
ಅಕ್ಷಾದೀನ್ವಿನಿಹತ್ಯಾ ವೀಕ್ಷ್ಯ ದಶಕಂ ದಗ್ಧ್ವಾ ಪುರೀಂ ತಾಂ ಪುನಃ
ತೀರ್ಣಾಬ್ಧಿಃ ಕಪಿಭಿರ್ಯುತೋ ಯಮನಮತ್ ತ್ತಂ ರಾಮಚನ್ದ್ರಂ ಭಜೇ ॥ 07 ॥

ಶ್ರೀಹನುಮಂತದೇವರು ವಾನರರ ಪ್ರಾರ್ಥನೆಯಂತೆ ಶ್ರೀರಾಮಚಂದ್ರದೇವರ ಅನುಗ್ರಹಬಲದಿಂದ, ಲೀಲೆಯಿಂದಲೇ ಮಹಾಸುಮುದ್ರವನ್ನು ದಾಟಿ, ಲಂಕಾನಗರಕ್ಕೆ ಹೋಗಿ, ರಾಮನ ಮಡದಿಯಾದ ಶ್ರೀ ಸೀತಾದೇವಿಯ ಪ್ರತಿಕೃತಿಯನ್ನು ದರ್ಶನಮಾಡಿ, ಅಶೋಕವನವನ್ನು ಧ್ವಂಸಮಾಡಿ, ರಾವಣನ ಮಗನಾದ ಅಕ್ಷಕುಮಾರನೇ ಮೊದಲಾದ ರಾಕ್ಷಸರುಗಳನ್ನು ಸಂಹಾರ ಮಾಡಿ, ದಶಕಂಠನಾದ ರಾವಣನನ್ನು ನೋಡಿ, ಆ ಲಂಕಾಪಟ್ಟಣವನ್ನು ಸುಟ್ಟು, ಮತ್ತೆ ವಿಸ್ತೀರ್ಣವಾದ ಸಮುದ್ರವನ್ನು ದಾಟಿ, ವಾನರರಿಂದೊಡಗೂಡಿ ಬಂದು, ಶ್ರೀರಾಮಚಂದ್ರನಿಗೆ ನಮಸ್ಕರಿಸಿದರು. ಇಂಥ ರಘುಕುಲಲಲಾಮನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ.

ಸಿನ್ಧುಂ ದಕ್ಷಿಣಮಾಗತೋ ದಶಮುಖಭ್ರಾತ್ರಿಷ್ಟದೋಽಭ್ಯರ್ಥಿತೋ
ಬದ್ಧ್ವಾ ಸೇತುಮವಾಪ್ಯ ರಾಕ್ಷಸಪುರೀಂ ಸೈನ್ಯೈಃ ಕಪೀನಾಂ ಯುತಃ ।
ಹತ್ವೇನ್ದ್ರಾರಿಕರೀರಕರ್ಣದಶಕಾದೀನ್ ರಾಕ್ಷಸಾನ್ ಜಾನಕೀ-
ಮಾದಾಯಾಪ್ಯ ಪುರೀಂ ಸ್ವರಾಜ್ಯ ಪದವೀಂ ಪಾಪ್ತೋಽವದಾತ್ ರಾಘವಃ ॥ 08 ॥

ಅನಂತರ ಶ್ರೀರಾಮಚಂದ್ರನು ದಕ್ಷಿಣ ಸಮುದ್ರಕ್ಕೆ ಬಂದು, ಅಲ್ಲಿಗೆ ತನಗೆ ಶರಣಾಗಿಬಂದ ರಾವಣನ ಸಹೋದರನಾದ ವಿಭೀಷಣನನ್ನು ಮಿತ್ರನನ್ನಾಗಿ ಸ್ವೀಕರಿಸಿ, ಅವನ ಇಷ್ಟವನ್ನು ಪೂರ್ಣಮಾಡಿ, ಸಮುದ್ರರಾಜನ ಪ್ರಾರ್ಥನೆಯಂತೆ ಸೇತುಬಂಧನ ಮಾಡಿ, ಕಪಿಸೈನ್ಯಗಳಿಂದ ಯುಕ್ತನಾಗಿ, ಲಂಕಾಪಟ್ಟಣವನ್ನು ತಲುಪಿ, ಕಪಿಸೈನ್ಯದೊಡನೆ ಸೇರಿ ಯುದ್ಧ ಮಾಡಿ ಇಂದ್ರಜಿತ್ತು, ಕುಂಭಕರ್ಣ, ರಾವಣನೇ ಮೊದಲಾದ ಸಮಸ್ತ ರಾಕ್ಷಸರನ್ನೂ ಸಂಹಾರ ಮಾಡಿ,

ಸೀತಾಕೃತಿಯನ್ನು ಕರೆದುಕೊಂಡು ಅಯೋಧ್ಯಾ ಪಟ್ಟಣಕ್ಕೆ ದಯಮಾಡಿಸಿ ಸಾಮ್ರಾಜ್ಯ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತನಾದನು. ಇಂಥ ಶ್ರೀರಘುಪತಿಯು ನಮ್ಮನ್ನು ಕಾಪಾಡಲಿ.

ಪ್ರಾಪ್ತಃ ಸಾಮ್ರಾಜ್ಯಲಕ್ಷ್ಮೀಂ ಪ್ರಿಯತಮಭರತಂ ಯೌವರಾಜ್ಯೇಽಬಿಷಿಚ್ಯ
ಸ್ವೀಯಾನ್ ರಕ್ಷನ್ ಸುತೌ ದ್ವೌ ಜನಕದುಹಿತರಿ ಪ್ರಾಪ್ಯ ಯಜ್ಞೈರ್ಯಜನ್ ಸ್ವಮ್ |
ಸೀತಾಹೇತೋರ್ವಿಮೋಹ್ಯ ಕ್ಷಿತಿಜದಿತಿಸುತಾನರ್ಥಿತೋ ದೇವಸಙ್ಘೈಃ
ಸದ್ಭಿರ್ಯುಕ್ತೋ ಹನೂಮದ್ವರದ ಉಪಗತಃ ಸ್ವಂ ಪದಂ ಪಾತು ರಾಮಃ || 09 ||

ಅಯೋಧ್ಯೆಯ ಸಾಮ್ರಾಜ್ಯ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತನಾದ ಶ್ರೀರಾಮಚಂದ್ರನು ಯುವರಾಜಪದದಲ್ಲಿ ಪ್ರಿಯ ತಮ್ಮನಾದ ಭರತನನ್ನು ಅಭಿಷೇಕಮಾಡಿ ನಿಯಮಿಸಿ, ತನ್ನವರಾದ ಬಂಧುಬಾಂಧವರೇ ಮೊದಲಾದ ಸಕಲ ಜನರನ್ನು ಕಾಪಾಡುವವನಾಗಿ, ಸೀತಾದೇವಿಯಲ್ಲಿ ಲವಕುಶರೆಂಬ ಇಬ್ಬರು ಪುತ್ರರನ್ನು ಪಡೆದು, ಅನೇಕ ಯಜ್ಞಗಳಿಂದ ತನ್ನನ್ನೇ ಕುರಿತು ಯಾಗಮಾಡಿದವನಾಗಿ, ಸೀತಾನಿಮಿತ್ತವಾಗಿ ಅಂದರೆ ಸೀತಾಪರಿತ್ಯಾಗಾದಿ ನಟನೆಗಳಿಂದ ಭೂಮಿಯಲ್ಲಿ ಜನಿಸಿದ ದೈತ್ಯರುಗಳನ್ನು ಮೋಹಗೊಳಿಸಿದವನಾಗಿ, ದೇವತೆಗಳಿಂದ ಸ್ವಸ್ಥಾನಕ್ಕೆ ದಯೆಮಾಡಿಸಬೇಕೆಂದು ಪ್ರಾರ್ಥಿತನಾಗಿ, ಸಜ್ಜನರಿಂದೊಡಗೂಡಿ, ಹನುಮಂತದೇವರಿಗೆ ವರಪ್ರಸಾದ ಮಾಡಿ ಅನುಗ್ರಹಿಸಿ, ತನ್ನ ಪರಮಪದವನ್ನು ಸೇರಿದ ಶ್ರೀರಾಮಚಂದ್ರ ಪ್ರಭುವು ನಮ್ಮೆಲ್ಲರನ್ನೂ ಸಂರಕ್ಷಣಮಾಡಲಿ.

ಕ್ಷೀರಾಬ್ಧ್ಯುನ್ಮಥನಾದಿಕಾತ್ಮಚರಿತಂ ದೇವೈರ್ಗೃಣದ್ಭಿಃ ಸ್ತುತಃ
ಸದ್ ಜ್ಞಾನಾಯ ಪರಾಶರಾಖ್ಯಾಮುನಿನಾ ಯಃ ಸತ್ಯವತ್ಯಾಮಭೂತ್ |
ವ್ಯಾಸತ್ವೇನ ವಿಧಾಯ ವೇದವಿವೃತಿಂ ಶಾಸ್ತ್ರಾಣಿ ಸರ್ವಾಣ್ಯಪಿ
ಜ್ಞಾನಂ ಸತ್ಸು ವಿಧಾಯ ತದ್ಗತಕಲಿಂ ನಿಘ್ನನ್ ಸ ನೋಽವ್ಯಾದ್ಧರಿಃ || 10 ||

ಬ್ರಹ್ಮದೇವರೇ ಮೊದಲಾದ ದೇವತೆಗಳು ಕ್ಷೀರಸಮುದ್ರಕ್ಕೆ ಹೋಗಿ ಶ್ರೀಹರಿಯನ್ನು ಪ್ರಾರ್ಥಿಸಲು ಭಗವಂತನು ಅವರಿಗೆ ದರ್ಶನವಿತ್ತನು. ಆಗ ದೇವತೆಗಳು " ಸ್ವಾಮಿ, ಹಿಂದೆ ನೀನು ಅಮೃತಮಥನ ಕಾಲದಲ್ಲಿ ಮಂದರಪರ್ವತವು ಕ್ಷೀರಸುಮುದ್ರದಲ್ಲಿ ಮುಳುಗಿದಾಗ, ಮತ್ತೆ, ಅಮೃತವಿತರಣಾದಿ ಕಾಲಗಳಲ್ಲಿ, ದೇವತೆಗಳ ಕ್ಷೇಮಕ್ಕಾಗಿ ಅದ್ಭುತಲೀಲೆಗಳನ್ನು ತೋರಿ ಅನುಗ್ರಹಿಸಿದ್ದೀಯೆ. ನಿನ್ನ ಅನುಗ್ರಹದಿಂದಲೇ ಈಗ ಮತ್ತೆ ನಮ್ಮ ಉದ್ಧಾರವಾಗಬೇಕಾಗಿದೆ. ಗೌತಮಮುನಿಗಳ ಶಾಪದಿಂದ, ಕಲಿಯ ಪ್ರಾಬಲ್ಯದಿಂದ, ತತ್ತ್ವಜ್ಞಾನ ಆಕುಲಿತವಾಗಿದೆ. ಮಿಥ್ಯಾಜ್ಞಾನ, ವಿಪರೀತಜ್ಞಾನಗಳಿಂದ ಮುಕ್ತಿಯೋಗ್ಯರು ಬಳಲುತ್ತಿದ್ದಾರೆ. ನೀನು ಪರಮಾನುಗ್ರಹ ಮಾಡಿ ಮತ್ತೆ ತತ್ತ್ವಜ್ಞಾನವನ್ನು ಸಂಸ್ಥಾಪಿಸಲು ಅವತರಿಸಿ, ಜ್ಞಾನವನ್ನು ಬೋಧಿಸಿ ಮುಕ್ತಿಯೋಗ್ಯರನ್ನು ಪೊರೆಯಬೇಕು. ಈ ಕಾರ್ಯವನ್ನು ನೆರವೇರಿಸಲು, ನಿನ್ನ ವಿನಃ ಮತ್ತಾರು

ಸಮರ್ಥರಲ್ಲ. ಸದ್ ಜ್ಞಾನವನ್ನು ಬೋಧಿಸಿ ನಮ್ಮೆಲ್ಲರನ್ನು ಕರುಣಿಸು " ಮುಂತಾಗಿ ಪ್ರಾರ್ಥಿಸಿದರು. ಶ್ರೀ ಹರಿಯು ಅವರ ಪ್ರಾರ್ಥನೆಯಂತೆ ಸತ್ಯವತೀದೇವಿಯಲ್ಲಿ ಶ್ರೀಪರಾಶರ ಮುನಿಗಳಿಂದ ಶ್ರೀವೇದವ್ಯಾಸರೂಪದಿಂದ ಅವತರಿಸಿ, ವೇದವಿಭಾಗಪೂರ್ವಕವಾಗಿ, ವೇದಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನೂ, ಸಕಲ ಶಾಸ್ತ್ರಗಳನ್ನೂ ರಚಿಸಿ, ಸದ್ ಜ್ಞಾನವನ್ನು ಉಪದೇಶಿಸಿ, ಸಜ್ಜನರಲ್ಲಿ ಅಡಗಿದ್ದ ಕಲಿಯನ್ನು ಹೊಡೆದೋಡಿಸಿ, ಪರಮಾನುಗ್ರಹ ಮಾಡಿದನು. ಇಂಥ ಶ್ರೀಹರಿಯು ನಮ್ಮನ್ನು ರಕ್ಷಣೆ ಮಾಡಲಿ.

ಭೂಪಾ ಯತ್ರ ಪುರೂರವಪ್ರಭೃತಯೋ ಜಾತಾ ವಿಧೋರನ್ವಯೇ
ಯದ್ವಾದ್ಯ ಭರತಾದಯಃ ಕುರುಮುಖಾಃ ಭೀಷ್ಮಾಮ್ಬಿಕೇಯಾದಯಃ |
ಭೂಭಾರಕ್ಷಯಕಾಙ್ಕ್ಷಿಭಿಸ್ಸುರವರೈರಭ್ಯರ್ಥಿತಃ ಶ್ರೀಪತಿಃ
ತತ್ರಾವಿರ್ಭವಿತುಂ ಸಹಾಮರಗಣೈರಿಚ್ಛನ್ ಹರಿಃ ಪಾತು ಮಾಮ್ || 11 ||

ಯಾವ ಚಂದ್ರವಂಶದಲ್ಲಿ ಪುರೂರವ, ಯದುರಾಜ, ಭರತ, ಕುರುರಾಜ ಮೊದಲಾದ ಭೂಪತಿಗಳು ಜನಿಸಿದರೋ, ಮತ್ತು ಶ್ರೀಭೀಷ್ಮಾಚಾರ್ಯರು, ಧೃತರಾಷ್ಟ್ರ- ಪಾಂಡು ಮೊದಲಾದ ನೃಪತಿಗಳು ಜನಿಸಿದರೋ, ಅಂತಹ ಚಂದ್ರವಂಶದಲ್ಲಿ ಭೂಭಾರಹರಣವನ್ನು ಅಪೇಕ್ಷಿಸುವ ಬ್ರಹ್ಮರುದ್ರೇಂದ್ರಾದಿ ಸುರಶ್ರೇಷ್ಠರಿಂದ ಪ್ರಾರ್ಥಿತನಾದ ಶ್ರೀ ಲಕ್ಷ್ಮೀಪತಿಯಾದ, ಶ್ರೀಮನ್ನಾರಾಯಣನು ಸುರಶ್ರೇಷ್ಠರಿಂದೊಡಗೂಡಿ ಆವಿರ್ಭವಿಸಬೇಕೆಂದು ಅಪೇಕ್ಷಿಸಿದನು. ಅಂಥ ಶ್ರೀಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ನಮ್ಮನ್ನು ರಕ್ಷಿಸಲಿ.

ದೇವಾಕ್ಯಾಂ ವಸುದೇವತೋಽಗ್ರಜಯುತೋ ಜಾತೋ ವ್ರಜಂ ಯೋಗತಃ
ಬಾಲಘ್ನೀ ಶಕಟಾಕ್ಷಹಾ ಸ್ವಜನನೀಮಾನ್ಯಸ್ತೃಣಾವರ್ತಹಾ |
ಯತ್ಪೂರ್ವಂ ಭರತಶ್ಚ ಪಾಣ್ಡುತನಯಾ ಯತ್ಸೇವನಂ ಜಜ್ಞಿರೇ
ಕರ್ತುಂ ಧರ್ಮಮರುದ್ವೃಷಾಶ್ವಿನರಜಂ ನನ್ದಾತ್ಮಜಂ ನೌಮಿ ತಮ್ || 12 ||

ಜಗಜ್ಜನ್ಮಾದಿಕಾರಣನಾದ, ಸಾಕ್ಷಾತ್ ಶ್ರೀಮನ್ನಾರಾಯಣನು, ದೇವಕೀದೇವಿಯಲ್ಲಿ ವಸುದೇವನಿಂದ, ಅಗ್ರಜನಾದ ಬಲರಾಮನಿಂದೊಡಗೂಡಿ, ಕೃಷ್ಣ ಎಂಬ ಹೆಸರಿಂದ ಅವತರಿಸಿದನು. ಶ್ರೀಕೃಷ್ಣನು ಗೋಕುಲಕ್ಕೆ ಪ್ರಯಾಣ ಬೆಳಸಿದನು. ಅಲ್ಲಿ ಬಾಲಕರನ್ನು ಸಂಹರಿಸುವ ಮತ್ತು ತನ್ನನ್ನು ಕೊಲ್ಲಲು ಬಂದ ಪೂತನಾ ಎಂಬ ರಾಕ್ಷಸಿಯನ್ನೂ, ಶಕಟಾಸುರನೆಂಬ ರಾಕ್ಷಸನನ್ನೂ, ಶ್ರೀಕೃಷ್ಣನು ಸಂಹರಿಸಿದನು. ಅವನ ತಾಯಿಯಾದ ಯಶೋದಾದೇವಿಯಿಂದ ಮಾನ್ಯನಾದನು ಮತ್ತು ಸುಂಟರಗಾಳಿರೂಪದಿಂದ ತನ್ನನ್ನು ಕೊಲ್ಲಲು ಬಂದಿದ್ದ ತೃಣಾವರ್ತನೆಂಬ ಅಸುರನನ್ನು ಸಂಹರಿಸಿದನು. ಶ್ರೀ ಕೃಷ್ಣನು ಅವತರಿಸುವುದಕ್ಕೆ ಮುಂಚಿತವಾಗಿ ಶ್ರೀಹರಿಗೆ ಶಯ್ಯಾರೂಪನಾದ ಶೇಷದೇವರು (ಬಲರಾಮನಾಗಿಯೂ)

ಪಾಂಡುರಾಜನ ಮಕ್ಕಳಾಗಿ ಯಮಧರ್ಮ, ವಾಯುದೇವ, ಇಂದ್ರ ಅಶ್ವಿನೀ ದೇವತೆಗಳ (ಧರ್ಮರಾಜ – ಭೀಮ – ಅರ್ಜುನ – ನಕುಲ – ಸಹದೇವರಾಗಿ) ಶ್ರೀಕೃಷ್ಣನ ಸೇವೆ ಮಾಡಲೆಂದು ಅವತರಿಸಿದರು. ಅಂಥ ಭಗವಂತನಾದ ನಂದಗೋಕುಲಕುಮಾರನಾದ ಶ್ರೀಕೃಷ್ಣನಿಗೆ ನಮಸ್ಕರಿಸುತ್ತೇನೆ.

ಸಂಸ್ಕಾರಾನ್ ಪ್ರಾಪ್ಯ ಗರ್ಗಾದ್ ಬಹುಶಿಶುಚರಿತ್ರೈಃ ಪ್ರೀಣಯನ್ ಗೋಪಗೋಪೀಃ
ವತ್ಸಾಃ ಧೇನೂಶ್ಚ ರಕ್ಷನ್ ಅಹಿಪತಿದಮನೋ ಯಃ ಪಪೌ ಕಾನನಾಗ್ನಿಮ್ ।
ವಿಪ್ರಸ್ತ್ರೀಪ್ರೀತಿಕಾರಿ ಧೃತಧರಣಿಧರೋ ಗೋಪಿಕಾಭಿರ್ನಿಶಾಸು
ಕ್ರೀಡನ್ ಮಲ್ಲಾಂಶ್ಚ ಕಂಸಂ ನ್ಯಹನದುಪಗತೋಽವ್ಯಾತ್ಸ ಕೃಷ್ಣಃ ಪುರೀಂ ಸ್ವಾಮ್ ॥ 13 ॥

ಶ್ರೀಕೃಷ್ಣ ಪರಮಾತ್ಮನು ಯಾದವರಿಗೆ ಗುರುಗಳಾದ ಗರ್ಗಾಚಾರ್ಯರಿಂದ ಜಾತಕರ್ಮ ನಾಮಕರಣಾದಿ ಸಂಸ್ಕಾರಗಳನ್ನು ಪಡೆದು, ತನ್ನ ಅನೇಕ ಬಾಲಲೀಲೆಗಳಿಂದ ಗೋಪಾಲಕರು ಮತ್ತು ಗೋಪಸ್ತ್ರೀಯರನ್ನು ಸಂತೋಷಗೊಳಿಸಿದನು. ಅದರಂತೆ ಶ್ರೀ ಕೃಷ್ಣನ ಗೆಳೆಯರಾದ ಗೋಪಾಲಕರೊಡನೆ ಗೊವು ಕರುಗಳಿಂದ ಕೂಡಿ, ಅರಣ್ಯದಲ್ಲಿ ಸಂಚರಿಸುತ್ತಾ ಆಕಳು ಕರುಗಳನ್ನು ಹುಲ್ಲು ನೀರುಗಳಿಂದ ತೃಪ್ತಿಪಡಿಸುತ್ತಾ, ಅವುಗಳನ್ನು ರಕ್ಷಿಸುತ್ತಿದ್ದನು. ಒಂದು ದಿನ ವಿಷಭರಿತವಾದ, ಕುಡಿಯಲು ಯೋಗ್ಯವಲ್ಲದ, ಯಮುನೆಯ ಜಲವನ್ನು ಪಾನಮಾಡಿ, ಗೋವು-ಕರುಗಳು ಮೂರ್ಛೆ ಹೊಂದಲು, ಅದಕ್ಕೆ ಕಾರಣವನ್ನು ತರ್ಕಿಸಿ, ಕಾಳಿಂದಿ ಮಡುವಿನಲ್ಲಿ ಧುಮುಕಿ, ಅಲ್ಲಿದ್ದ ಕಾಲೀಯ ಎಂಬ ಸರ್ಪರಾಜನ ಹೆಡೆಯೇರಿ ಕುಣಿದು, ಸರ್ಪರಾಜನನ್ನು ಮರ್ದಿಸಿ, ಸರ್ಪಪತ್ನಿಯರಿಂದ ಪ್ರಾರ್ಥಿತನಾಗಿ, ಸಪರಿವಾರನಾದ ಕಾಲಿಯನನ್ನು ರಮಣದ್ವೀಪಕ್ಕೆ ಕಳುಹಿಸಿ, ಅವನನ್ನು ಅನುಗ್ರಹಿಸಿದನು. ಒಮ್ಮೆ ಗೋವುಗಳೊಡನೆ ಅರಣ್ಯದಲ್ಲಿರುವಾಗ ಗೋಪಾಲಕರು, ಗೋವುಗಳು ಕಾಡುಗಿಚ್ಚಿನ ಬೇಗೆಗೆ ಸಿಲುಕಿ ಬಳಲುತ್ತಿರುವಾಗ, ಸ್ವಜನವತ್ಸಲನಾದ ಶ್ರೀ ಕೃಷ್ಣನು, ತಾನೇ ಕಾಡುಗಿಚ್ಚನ್ನು ಪಾನಮಾಡಿ, ಅವರೆಲ್ಲರನ್ನು ರಕ್ಷಿಸಿದನು. ಮತ್ತೊಮ್ಮೆ ಅರಣ್ಯದಲ್ಲಿ ಸಂಚರಿಸಿ ಬಳಲಿರುವಾಗ ಬ್ರಾಹ್ಮಣ ಸ್ತ್ರೀಯರು ಪ್ರೀತಿಯಿಂದ ತಂದು ನೀಡಿದ, ಮೊಸರನ್ನ ಮೊದಲಾದ ಭೋಜನವನ್ನು ಗೆಳೆಯರಿಂದೊಡಗೂಡಿ ಭುಂಜಿಸಿ, ಬ್ರಾಹ್ಮಣ ಸ್ತ್ರೀಯರನ್ನು ಪ್ರೀತಿಪಡಿಸಿದನು. ಇನ್ನೊಂದು ಸಲ ಇಂದ್ರೋತ್ಸವವನ್ನು ನಡೆಸಲಿಲ್ಲವೆಂದು, ಗೋಪಾಲಕರ ಮೇಲೆ ಕುಪಿತನಾದ ಇಂದ್ರನು, ಧಾರಾಕಾರವಾಗಿ ಮಳೆ ಸುರಿಸಲು, ಅದರಿಂದ ಭೀತರಾಗಿ ಕಷ್ಟಪಡುತ್ತಿದ್ದ ಸರ್ವರನ್ನೂ ಕಾಪಾಡಲು, ಗೋವರ್ಧನ ಗಿರಿಯನ್ನು ತನ್ನ ಕರಾಗ್ರದಿಂದ ಛತ್ರಿಯಂತೆ ಮೇಲೆತ್ತಿ ಹಿಡಿದು, ಗೋಪ-ಗೋಪಿಯರನ್ನೂ, ಹಸು-ಕರುಗಳನ್ನೂ ಸಂರಕ್ಷಿಸಿದನು. ಮತ್ತೊಮ್ಮೆ ಚಂದ್ರಿಕೆಯ ಭವ್ಯ ರಾತ್ರಿಯಲ್ಲಿ ಗೋಪಿಯರು, ಗೋಪಾಲಕರೊಡನೆ ಸೇರಿ ರಾಸಕ್ರೀಡೆಯಾಡಿ, ಸರ್ವರನ್ನು ಮುದಗೊಳಿಸಿದನು. ಕೃಷ್ಣನನ್ನು " ಧನುರ್ಯಜ್ಞದ " ನೆಪದಿಂದ ಸಂಹರಿಸಲು ನಿಶ್ಚಯಿಸಿದ ಕಂಸನು

ಅಕ್ರೂರನ ಮೂಲಕ ಕೃಷ್ಣನಿಗೆ ಆಹ್ವಾನ ಕಳಿಸಿದನು. ಆಗ ಕೃಷ್ಣನು, ತಂದೆ, ಬಾಂಧವರು, ಗೋಪಾಲಕರು, ಬಲರಾಮಾದಿಗಳೊಡನೆ ಮಧುರಾಪಟ್ಟಣಕ್ಕೆ ಬಂದು, ಬಾಹುಯುದ್ಧವಿಶಾರಧರಾದ ಚಾಣೂರ, ಮುಷ್ಟಿಕ ಮೊದಲಾದ ಮಲ್ಲರನ್ನು ಸಂಹರಿಸಿ, ಕೊನೆಗೆ ಸೋದರಮಾವನಾದ ಕಂಸನನ್ನು ಸಂಹರಿಸಿದನು. ಇಂತು ಮಹಾಮಹಿಮನಾದ ಶ್ರೀಕೃಷ್ಣಪರಮಾತ್ಮನು ನಮ್ಮೆಲ್ಲರನ್ನೂ ಕಾಪಾಡಲಿ.

ಪಿತ್ರೋರ್ಬನ್ಧಂ ನಿರಸ್ಯ ಕ್ಷಿತಿಪತಿಮಕರೋದುಗ್ರಸೇನಂ ಗುರೋರ್ಯಃ
ಪುತ್ರಂ ಪ್ರಾದಾತ್ಪರೇತಂ ಯುಧಿವಿಜಿತಜರಾಸನ್ಧಪೂರ್ವಾರಿವರ್ಗಃ ।
ಪಾರ್ಥಾನ್ ಪಿತ್ರಾವಿಹೀನಾನುಪಗತನಗರಾನ್ ಯಸ್ತ್ವಜೋಪಾದ್ವಿಪದ್ಭ್ಯೋ
ನನ್ದಾದೀನುದ್ಧವೋಕ್ತ್ಯಾ ಗತವಿರಹಶುಚಃ ಕಾರಯನ್ ಮಾವತಾತ್ಸಃ ॥ 14 ॥

ಜನನಕಹಿತನಾದ ಶ್ರೀಕೃಷ್ಣಪರಮಾತ್ಮನು ಕಂಸನನ್ನು ಸಂಹಾರಮಾಡಿ, ಕಾರಾಗೃಹದಲ್ಲಿದ್ದ ತಾಯಿತಂದೆಗಳಾದ ದೇವಕೀವಸುದೇವರನ್ನು ನಿಗಡಬಂಧನದಿಂದ ಬಿಡುಗಡೆ ಮಾಡಿದನು. ಕಂಸನ ತಂದೆಯಾದ ಉಗ್ರಸೇನನನ್ನು ಯಾದವ ರಾಜ್ಯಕ್ಕೆ ದೊರೆಯನ್ನಾಗಿ ಮಾಡಿದನು. ಅನಂತರ ತನ್ನ ವಿದ್ಯಾಗುರುಗಳಾದ ಸಾಂದೀಪಿನ್ಯಾಚಾರ್ಯರ, ಮೃತನಾದ ಪುತ್ರನನ್ನು ಮತ್ತೆ ಬದುಕಿಸಿ, ಗುರುಗಳಿಗೆ ತಂದೊಪ್ಪಿಸಿದನು. ಯುದ್ಧದಲ್ಲಿ ಜರಾಸಂದನೇ ಮೊದಲಾದ ಶತ್ರುಸಮೂಹವನ್ನು ಜಯಿಸಿದನು. ಅರಣ್ಯದಲ್ಲಿ ಪಾಂಡುರಾಜನು ಮೃತನಾಗಿ, ಮಾದ್ರಿದೇವಿಯು ಸತಿಹೋಗಿ, ಅನಾಥರಾಗಿದ್ದ ಪಾಂಡವರು ಕುಂತಿಸಹಿತರಾಗಿ ರಾಜಧಾನಿಗೆ ಮರಳಿದಾಗ, ಅವರಿಗೆ ಬಂದೊದಗಿದ ಸಕಲವಿಪತ್ತುಗಳನ್ನು ಪರಿಹರಿಸಿ ಕಾಪಾಡಿದನು. ತನ್ನ ವಿರಹದುಃಖದಿಂದ ಬಳಲುತ್ತಿದ್ದ ನಂದಗೋಪ ಮೊದಲಾದವರನ್ನು, ಉದ್ಧವನ ಮೂಲಕ ಸಂದೇಶ ಕಳುಹಿಸಿ ಪ್ರಿಯವಚನಗಳಿಂದ ಸಾಂತ್ವನಗೊಳಿಸಿ, ಅವರ ವಿರಹದುಃಖವನ್ನು ಪರಿಹರಿಸಿದನು. ಇಂತು ಮಹಾಮಹಿಮವಂತನಾದ ಆ ಶ್ರೀ ಕೃಷ್ಣನು ನನ್ನನ್ನು ರಕ್ಷಿಸಲಿ.

ಯಸ್ಮಾದ್ ವ್ಯಾಸಸ್ವರೂಪಾದಪಿ ವಿದಿತಸುವಿದ್ಯಾಪ್ಯಾಯಯುಶ್ಚ ಪ್ರಮೋದಂ
ಪಾರ್ಥಾ ದ್ರೋಣತ್ಸುತಾರ್ಥಂ ಪ್ರತಿಗತಭೃಗುಪೋ ಯನ್ನಿಯತ್ಯಾರ್ಥಕಾಮಃ ।
ತಸ್ಮಾದಾಪ್ತೋರುವಿದ್ಯೋ ದ್ರುಪದಮುಪಗತೋऽನಾಪ್ತಕಾಮಃ ಸ್ವವಿದ್ಯಾಃ
ಶಿಷ್ಯೇಭ್ಯಃ ಕೌರವೇಭ್ಯೋ ದಿತಿಜನಿರಸನೋऽದಾತ್ ಸ ನೋऽವ್ಯಾನ್ಮುರಾರಿಃ ॥ 15 ॥

ಶ್ರೀಮನ್ನಾರಾಯಣಾಭಿನ್ನನಾದ ಶ್ರೀವೇದವ್ಯಾಸರೂಪಿ ಶ್ರೀಕೃಷ್ಣಪರಮಾತ್ಮನು, ತನ್ನ ಭಕ್ತರೂ, ಸೋದರತ್ತೆಯ ಮಕ್ಕಳೂ, ಆದ ಧರ್ಮರಾಜಾದಿ ಪಾಂಡವರಿಗೆ ಸಕಲ ಶ್ರೇಷ್ಠವಿದ್ಯಗಳನ್ನು ಹೇಳಿಕೊಟ್ಟು ಅನುಗ್ರಹಿಸಿದನು. ಪಾಂಡವರು ಶ್ರೀಕೃಷ್ಣನಿಂದ ಸಮಸ್ತ ವಿದ್ಯೆಗಳನ್ನೂ ಕಲಿತು, ಬಹು ಸಂತೋಷಭರಿತರಾದರು. ಇದರಂತೆ ಶ್ರೀಕೃಷ್ಣನ ಪ್ರೇರಣೆಯಿಂದ ದ್ರೋಣಾಚಾರ್ಯರಲ್ಲಿ

ಕೌರವರೊಡನೆ ಸೇರಿ ಪಾಂಡವರು ಸಕಲ ಶಸ್ತ್ರಾಸ್ತ್ರ ವಿದ್ಯೆಗಳನ್ನು ಕಲಿತರು. ದ್ರೋಣಾಚಾರ್ಯರು ಶ್ರೀ ಕೃಷ್ಣನ ಪ್ರೇರಣೆಯಿಂದ ತಮ್ಮ ಪುತ್ರ ಅಶ್ವತ್ಥಾಮಾಚಾರ್ಯರಿಗೆ, ಹಾಲಿಗೋಸ್ಕರವಾಗಿ ಶ್ರೀಪರಶುರಾಮದೇವರಲ್ಲಿ ಹೋಗಿ ಅವರ ಆಶ್ರಯದಲ್ಲಿದ್ದು, ಸಮಸ್ತ ವಿದ್ಯೆಗಳನ್ನೂ ಅಭ್ಯಾಸಮಾಡಿದರು. ಆದರೆ ಯಾವ ಉದ್ದೇಷ್ಯಕ್ಕಾಗಿ ಅಲ್ಲಿಗೆ ಹೋಗಿದ್ದರೋ, ಆ ವಾಂಚಿತ ಮಾತ್ರ ಪೂರ್ಣವಾಗಲಿಲ್ಲ. ಅದರಿಂದ ಅವರು ತಮ್ಮ ಮಿತ್ರನಾದ ಪಾಂಚಾಲ ದೇಶಾಧಿಪತಿಯಾದ ದ್ರುಪದರಾಜನಲ್ಲಿಗೆ ಹೋದರು. ಅಲ್ಲಿಯೂ ಅವರ ಮನೋರಥ ಪೂರ್ಣವಾಗಲಿಲ್ಲ. ಆದ್ದರಿಂದ ದ್ರೋಣಾಚಾರ್ಯರು ಶ್ರೀಕೃಷ್ಣನ ಪ್ರೇರಣೆಯಿಂದ, ಹಸ್ತಿನಾವತಿಗೆ ಬಂದು, ಅಲ್ಲಿ ರಾಜಾಶ್ರಯವನ್ನು ಸಂಪಾದಿಸಿ, ಕುರುಕಲಸಂಜಾತರಾದ ಪಾಂಡವರು ಮತ್ತು ದುರ್ಯೋಧನಾದಿ ಧಾರ್ತರಾಷ್ಟ್ರರಿಗೆ, ತಾವು ಕಲಿತಿದ್ದ ಸಕಲ ಶಸ್ತ್ರಾಸ್ತ್ರವಿದ್ಯೆಗಳನ್ನು ಹೇಳಿಕೊಟ್ಟರು. ಹೀಗೆ ಪಾಂಡವರು ಶ್ರೀಕೃಷ್ಣನಲ್ಲಿಯೂ, ನಂತರ ಅವನ ಪ್ರೇರಣೆಯಂತೆ ದ್ರೋಣಾಚಾರ್ಯರಲ್ಲಿಯೂ, ಸಕಲ ವಿದ್ಯೆಗಳನ್ನೂ ಕಲಿತರು. ಇಂತಹ ದೈತ್ಯಸಂಹಾರಕನಾದ, ಮುರವೈರಿಯಾದ ಶ್ರೀಕೃಷ್ಣಪರಮಾತ್ಮನು ನಮ್ಮನ್ನು ಕಾಪಾಡಲಿ.

ಭೂಯಸ್ತ್ವಾಗತಮಾಜಯೇ ಸಹಜರಾಸನ್ಧಂ ನೃಪೈರ್ನೀತಯೇ
ಜ್ಞಾತ್ವಾಽಯಾತ್ ಸಹಜಾನ್ವಿತೋಽತಿಗಹನಂ ಗೋಮನ್ತಮತ್ರಗತಾನ್ ।
ತಾರ್ಕ್ಷ್ಯಾಲ್ಲಬ್ಧಕಿರೀಟ ಉನ್ನತಗಿರೇರಾಪ್ಲುತ್ಯ ಜಿತ್ವಾ ರಿಪೂನ್
ಹತ್ವಾ ಸ್ವೀಯಸೃಗಾಲಮಾತ್ಮನಗರೀಂ ಪ್ರಾಪ್ತಃ ಸ ನೋಽವ್ಯಾದ್ ಹರಿಃ ॥ 16 ॥

ಮಧುರೆಯಲ್ಲಿ ಶ್ರೀಕೃಷ್ಣನು ಇರುವಾಗ ತನ್ನ ಅಳಿಯನಾದ ಕಂಸನನ್ನು ಸಂಹರಿಸಿದನೆಂಬ ಕೋಪದಿಂದ ಜರಾಸಂಧನು, ಸಕಲ ಸಾಮಂತರಾಜರು ಮತ್ತು ಸೈನಿಕರಿಂದೊಡಗೂಡಿ, ಶ್ರೀಕೃಷ್ಣನನ್ನು ಜಯಿಸಿ ಸಂಹರಿಸಬೇಕೆಂಬ ದುರಭಿಸಂಧಿಯಿಂದ ಬಂದನು. ಶ್ರೀಕೃಷ್ಣನು, ಜರಾಸಂಧನು ಮತ್ತೆ ತನ್ನ ಮೇಲೆ ಯುದ್ಧ ಮಾಡಲು ಬಂದಿದ್ದಾನೆಂದು ತಿಳಿದು, ಅತ್ಯಂತ ಸಮರ್ಥನೂ, ಅರಿಭಯಂಕರನು ತಾನಾಗಿದ್ದರೂ, ಜರಾಸಂಧನನ್ನು ಅಲ್ಲಿಯೇ ಜಯಿಸಲು ಸಮರ್ಥನಾಗಿದ್ದರೂ, ಜಗತ್ತಿಗೆ ಇಂಥ ಸಮಯದಲ್ಲಿ ಹೇಗೆ ವರ್ತಿಸಬೇಕೆಂಬ ರಾಜನೀತಿಯನ್ನು ತೋರಿಕೊಡಲೋಸುಗ, ಅಣ್ಣ ಬಲರಾಮನಿಂದ ಕೂಡಿಕೊಂಡು, ಅತಿಗಹನವಾದ ಗೋಮಂತ ಪರ್ವತಕ್ಕೆ ಹೋದನು. ಆ ಗೋಮಂತ ಪರ್ವತದಲ್ಲಿ, ಗರುಡನು ತಂದು ಸಮರ್ಪಿಸಿದ ತನ್ನ ಕಿರೀಟವನ್ನು ಪಡೆದು, ಎತ್ತರವಾದ ಆ ಬೆಟ್ಟದಿಂದ ಹಾರಿ, ಅಲ್ಲಿಗೆ ಬಂದ ಸಮಸ್ತ ಶತ್ರುಗಳನ್ನು ಜಯಿಸಿ, ಸೋದರರನಾದ ಸೃಗಾಲ ವಾಸುದೇವನನ್ನು ಸಂಹರಿಸಿ, ಮಥುರಾಪಟ್ಟಣಕ್ಕೆ ಮರಳಿ ಬಂದನು. ಇಂತಹ ಮಹಾಮಹಿಮನಾದ ಶ್ರೀ ಕೃಷ್ಣನು ನಮ್ಮನ್ನು ಕಾಪಾಡಲಿ.

ಭಗ್ನಶಾನ್ ನೃಪತೀನರೀನ್ ವ್ಯಧಿತ ಯಃ ಸ್ವರ್ಗಾಧಿಪಾಗ್ರ್ಯಾಸನೇ
ಲಗ್ನೋ ಭೀಷ್ಮಕಸತ್ಕೃತೋऽಥ ಯವನಂ ಜಘ್ನೇ ಸತೀಮಾತ್ಮನಃ |
ನಿಘ್ನಾಂ ಯೋऽಕೃತ ರುಗ್ಮಿಣೀಂ ಸಮಜಯುದ್ದುರ್ಗರ್ವರುಕ್ಮಾದಿಕಾನ್
ನಿಘ್ನನ್ ಸತ್ರಜಿದಾತ್ಮಜಾಪತಿರಸೌ ಮೇऽಘಂ ಭವೇತ್ ಸರ್ವದಾ || 17 ||

ಶ್ರೀಕೃಷ್ಣಪರಮಾತ್ಮನು, ತನ್ನ ಶತ್ರುಗಳಾದ ಜರಾಸಂಧನೇ ಮೊದಲಾದ ರಾಜರುಗಳನ್ನು ಭಗ್ನವಾದ ಆಶೆಯುಳ್ಳವರನ್ನಾಗಿ, ಅಂದರೆ ತನ್ನನ್ನು ಜಯಿಸಲಿಚ್ಛಿಸಿ ಬಂದ ಅವರನ್ನು ತಾನೇ ಸೋಲಿಸಿದ್ದರಿಂದ, ಅವರು ನಿರಾಶರಾಗುವಂತೆ ಮಾಡಿದನು. ಸ್ವರ್ಗಲೋಕಾದಿಪತಿಯಾದ ದೇವೇಂದ್ರನ ಶ್ರೇಷ್ಠವಾದ ಸಿಂಹಾಸನದಲ್ಲಿ ಶ್ರೀಕೃಷ್ಣನು ಮಂಡಿಸಿದನು. ಭೀಷ್ಮಕಮಹಾರಾಜನಿಂದ ಪೂಜಿತನಾದನು. ಆ ತರುವಾಯ ಶ್ರೀ ಕೃಷ್ಣನು ಯುದ್ಧದಲ್ಲಿ ಕಾಲಯವನನನ್ನು ಸಂಹಾರಮಾಡಿದನು. ಶ್ರೀ ರುಕ್ಮಿಣೀದೇವಿಯು ಮೊದಲೇ " ನಾನು ನಿನಗೆ ಮನಸೋತಿದ್ದೇನೆ, ನೀನು ನನ್ನನ್ನು ಪತ್ನಿಯನ್ನಾಗಿ ಸ್ವೀಕರಿಸಿ ಅನುಗ್ರಹಿಸು " ಎಂದು, ಪತ್ರಬರೆದು ಬ್ರಾಹ್ಮಣೋತ್ತಮನ ಮೂಲಕ, ಕಳಿಸಿ ಪ್ರಾರ್ಥಿಸಿದ್ದರಿಂದ, ತನಗೆ ಸ್ವಾದೀನಳಾದ ರುಕ್ಮಿಣೀದೇವಿಯ ಮನೋರಥವನ್ನು ಪೂರ್ಣ ಮಾಡುವುದಕ್ಕಾಗಿ ಪ್ರಯಾಣಬೆಳೆಸಿ, ರುಕ್ಮಿಣಿಯನ್ನು ರಥದಲ್ಲಿ ಕೂಡಿಸಿಕೊಂಡು ಹೊರಟನು. ಆಗ ಅದರಿಂದ ಕೋಪೋದ್ರೇಕಗೊಂಡು, ಶ್ರೀ ಕೃಷ್ಣನನ್ನು ಸಂಹರಿಸುತ್ತೇವೆಂಬ ದುರಹಂಕಾರದಿಂದ ಯುದ್ಧಕ್ಕೆ ಬಂದ, ರುಕ್ಮಿಣಿಯ ಸಹೋದರನಾದ ರುಕ್ಮಿ ಮೊದಲಾದವರನ್ನು ಯುದ್ಧದಲ್ಲಿ ಜಯಿಸಿದನು. ಇಂತು ಮಹಾಪರಾಕ್ರಮಸಂಪನ್ನನಾದ, ಸತ್ರಾಜಿತ್ ರಾಜನ ಕುವರಿಯಾದ ಸತ್ಯಭಾಮಾದೇವಿಯನ್ನು ವಿವಾಹ ಮಾಡಿಕೊಂಡು, ಅವಳಿಗೆ ಪತಿಯಾದ, ಶ್ರೀ ಕೃಷ್ಣನು ಸರ್ವದಾ ನನ್ನ ಪಾಪವನ್ನು (ವಿಘ್ನವನ್ನು) ಪರಿಹರಿಸುವವನಾಗಲಿ.

ಅಸ್ತ್ರಜ್ಞೇಷ್ವಧಿಕೋऽರ್ಜುನೋऽಥ ಯದನುಕ್ರೋಶೇನ ಭೀಮಂ ವಿನಾ-
ಸದ್ಧರ್ಮೇ ನಿರತಮ ದದೌ ಸ್ವಗುರವೇ ಬದ್ಧ್ವಾ ನೃಪಂ ಪಾರ್ಷತಮ್ |
ಪುತ್ರೌ ಸ ದ್ರುಪದೋऽಪಿ ವಹ್ನಿವಿಬುಧಾತ್ ಸ್ತ್ರೀರೂಪಕಾವಾಪ್ತವಾನ್
ದಿಷ್ಟ್ಯಾ ಧರ್ಮಜ ಆಪ ರಾಜ್ಯಪದವೀಂ ಸ ಪ್ರೀಯತಾಂ ಮೇ ಹರಿಃ || 18 ||

ಶ್ರೀಕೃಷ್ಣಪರಮಾತ್ಮನ ಕಾರುಣ್ಯಾತಿಶಯದಿಂದ, ಅರ್ಜುನನು, ಭೀಮಸೇನನ್ನು ಬಿಟ್ಟು, ಉಳಿದ ಸಮಸ್ತ ಧನುರ್ಧಾರಿಗಳಲ್ಲಿ ಅತ್ಯಂತ ಶ್ರೇಷ್ಠನೆನಿಸಿದನು. ಗುರುಕುಲದಲ್ಲಿರುವಾಗ ದ್ರುಪದನು, ಮಿತ್ರನಾದ ದ್ರೋಣನಿಗೆ ಅರ್ಧ ರಾಜ್ಯವನ್ನು ಕೊಡುವುದಾಗಿ, ಪ್ರತಿಜ್ಞಾಪೂರ್ವಕ ವಚನಬದ್ಧನಾಗಿ, ನಂತರ ಪಾಂಚಾಲದೇಶಾಧಿಪತಿಯಾದ ಮೇಲೆ, ಅದನ್ನು ಮರೆತು, ಪ್ರತಿಜ್ಞಾಭಂಗರೂಪ ಅಧರ್ಮಾಸಕ್ತನಾಗಿ, ದ್ರೋಣಾಚಾರ್ಯರನ್ನು ಅಪಮಾನಗೊಳಿಸಿದ್ದನು. ಇದರಿಂದ ದ್ರೋಣರಿಗೆ ಬಹಳ ಅಸಮಾಧಾನವಗಿದ್ದಿತು. ಅರ್ಜುನನು ದ್ರೋಣಾಚಾರ್ಯರ ಅಪ್ಪಣೆಯಂತೆ

ಗುರುದಕ್ಷಿಣಾರೂಪವಾಗಿ, ದ್ರುಪದರಾಜನನ್ನು ಯುದ್ಧದಲ್ಲಿ ಜಯಿಸಿ, ಅವನನ್ನು ಬಂಧಿಸಿ ತಂದು, ದ್ರೋಣಾಚಾರ್ಯರಿಗೆ ಒಪ್ಪಿಸಿ, ಅವರ ಅನುಗ್ರಹಕ್ಕೆ ಪಾತ್ರನಾದನು. ತನಗಾದ ಅಪಮಾನದಿಂದ ಕಡುನೊಂದ ದ್ರುಪದರಾಜನು, ದ್ರೋಣರನ್ನು ಸಂಹರಿಸಲು, ಶಕ್ತನಾದ ಓರ್ವ ಪುತ್ರ, ಮತ್ತು ಅರ್ಜುನನನ್ನು ವರಿಸುವ ಓರ್ವ ಪುತ್ರಿಗಾಗಿ ಯಜ್ಞವನ್ನಾಚರಿಸಿ, ಅಗ್ನಿದೇವರಿಂದ ಸ್ತ್ರೀರೂಪದ ಪುತ್ರ-ಪುತ್ರಿಯರನ್ನು ಪಡೆದನು. ಇತ್ತ ಧರ್ಮರಾಜನು ವಾರಣಾವತಿಯಲ್ಲಿ ಕುರುರಾಜ್ಯದ ಯೌವ್ವರಾಜ್ಯಪದದಲ್ಲಿ ಸಂತೋಷದಿಂದ ಅಭಿಷಿಕ್ತನಾದನು. ಇಂತು ಪಾಂಡವರನ್ನು ಅನುಗ್ರಹಿಸಿದ ಶ್ರೀಕೃಷ್ಣಪರಮಾತ್ಮನು ನನ್ನಲ್ಲಿ ಸುಪ್ರೀತನಾಗಲಿ.

ಯತ್ಕಾರುಣ್ಯಬಲೇನ ಪಾಣ್ಡುತನಯಾ ನಿಸ್ತೀರ್ಯ ನಾನಾಪದೋ
ಭಿಕ್ಷಾನ್ನಾಶಿನ ಆಗಮಾಭ್ಯಸನಿನೋ ಹತ್ವಾ ಬಕಂ ದ್ರೌಪದೀಂ |
ಉದ್ವಾಹ್ಯಾಖಿಲಭೂಪತೀನಪಿ ರಣೇ ಜಿತ್ವಾ ಗತಾಃ ಸ್ವಾಂ ಪುರೀ-
ಮಿನ್ದ್ರಪ್ರಸ್ಥಪುರೇಽವಸನ್ ಕೃತಧರಾರಕ್ಷಾಃ ಸ ನೋಽವ್ಯಾದ್ ಹರಿಃ || 19 ||

ಪಾಂಡವರು, ಶ್ರೀಕೃಷ್ಣಪರಮಾತ್ಮನ ಕಾರುಣ್ಯಾತಿಶಯದಿಂದ ವಿಷಾನ್ನ, ಸರ್ಪದಂಶನ, ಅರಗಿನಮನೆಯ ಅಪಾಯ, ಹೀಗೆ ಅನೇಕ ವಿಧವಾದ ಆಪತ್ತುಗಳಿಂದ ಪಾರಾದರು ಮತ್ತು ಏಕಚಕ್ರನಗರದಲ್ಲಿ, ಬ್ರಾಹ್ಮಣರ ವೇಷದಿಂದ ವಾಸಮಾಡುತ್ತ, ಭಿಕ್ಷಾಟನೆಯಿಂದ ಜೀವಿಸುತ್ತಾ, ವೇದಾಧ್ಯಯನರತರಾಗಿದ್ದರು. ಭೀಮಸೇನನು ಬಕಾಸುರನನ್ನು ಸಂಹರಿಸಿ, ಪುರಜನರಿಗೊದಗಿದ್ದ ಸಂಕಟವನ್ನು ಪರಿಹರಿಸಿದನು. ಮುಂದೆ ಶ್ರೀವೇದವ್ಯಾಸದೇವರ ಅಣತಿಯಂತೆ ಪಾಂಚಾಲ-ನಗರಿಗೆ ಪ್ರಯಾಣ ಬೆಳೆಸಿ, ಅಲ್ಲಿ ದ್ರುಪದರಾಜನು ಏರ್ಪಡಿಸಿದ್ದ, ದ್ರೌಪದೀ-ಸ್ವಯಂವರದಲ್ಲಿ ಭಾಗವಹಿಸಿದರು. ಆಗ ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸಿದನು. ಆ ತರುವಾಯ ಕುಂತೀದೇವಿಯ ಹಾಗೂ ವೇದವ್ಯಾಸರ ಅಪ್ಪಣೆಯಂತೆ, ಐದೂ ಜನ ಪಾಂಡವರೂ ದ್ರೌಪದಿಯನ್ನು ವಿವಾಹವಾದರು. ಆ ಕಾಲದಲ್ಲಿ ತಮ್ಮ ಮೇಲೆ ಯುದ್ಧಕ್ಕೆ ಬಂದ ಸಕಲ ರಾಜರನ್ನೂ ಜಯಿಸಿ, ಹಸ್ತಿನಾಪುರಕ್ಕೆ ಬಂದರು. ದೊಡ್ಡ ತಂದೆಯಾದ ಧೃತರಾಷ್ಟ್ರನ ಆದೇಶದಂತೆ ಪಾಂಡವರು ಇಂದ್ರಪ್ರಸ್ಥಪುರಕ್ಕೆ ತೆರಳಿ, ಅಲ್ಲಿ ಶ್ರೀಕೃಷ್ಣನ ಸಹಾಯದಿಂದ, ಮಯನು ನಿರ್ಮಿಸಿದ ಸುಂದರ ರಾಜಧಾನಿಯಲ್ಲಿ ರಾಜ್ಯಭಾರಮಾಡುತ್ತಾ, ಸುಖದಿಂದ ವಾಸಮಾಡಿದರು. ಇಂತು ಪಾಂಡವರನ್ನು ಅನುಗ್ರಹಿಸಿದ ಶ್ರೀಕೃಷ್ಣನು ನಮ್ಮನ್ನು ಕಾಪಾಡಲಿ.

ಯಃ ಪಾರ್ಥಾನ್ ಪರಿಪಾಲಯನ್ ಹರಿಪುರೇ ಸ್ತ್ರೀಪುತ್ರಸಮ್ಪದ್ಯುತಾನ್
ಸಂಹರ್ತಾ ಶತಧ್ವನನೋಽಷ್ಟಮಹೀಷೀಭರ್ತಾ ಸುರಷಿಸ್ತುತಃ |
ಹತ್ವಾ ಭೌಮಮಪಾಹರತ್ ಸುರತರುಂ ಬಿಭ್ಯೇರುವಾಹಾಙ್ಗನಾಃ
ಪ್ರಾಯಚ್ಛದ್ ಹರಿಸೂನವೇ ಸ್ವಸಹಜಾಂ ಪಾಯತ್ಸ ನಃ ಕೇಶವಃ || 20 ||

ಶ್ರೀಕೃಷ್ಣನು, ಇಂದ್ರಪ್ರಸ್ಥದಲ್ಲಿ ರಾಜ್ಯಭಾರ ಮಾಡುತ್ತಿರುವ, ಪತ್ನೀಪುತ್ರರುಗಳಿಂದ ಸಹಿತರಾದ ಪಾಂಡವರಿಗೆ, ಸಕಲವಿಧವಾದ ಸಹಾಯ ಮಾಡುತ್ತಾ ಸಂರಕ್ಷಿಸಿದನು. ಸತ್ರಾಜಿದ್ರಾಜನನ್ನು ಸಂಹರಿಸಿ, ಅವನಲ್ಲಿದ್ದ ಶ್ಯಮಂತಕಮಣಿಯನ್ನು ಅಪಹಾರಮಾಡಿದ, ಶತಧನ್ವನನ್ನು ಸಂಹಾರ ಮಾಡಿದನು. ಸುರಸುಂದರಿಯಾದ ಎಂಟುಜನ ಪಟ್ಟದ ರಾಣಿಯರಿಗೆ ಪ್ರಿಯಕರನಾದ, ಆ ಪ್ರಭುವು ಪ್ರೀತಿಯ ರಾಣಿಯಾದ ಸತ್ಯಭಾಮಾದೇವಿಯ ಅಭಿಲಾಷೆಯನ್ನು ಪೂರ್ಣಮಾಡಲು, ಇಂದ್ರನ ನಂದನವನದಲ್ಲಿ ಶೋಭಿಸುತ್ತಿದ್ದ ಪಾರಿಜಾತ ವೃಕ್ಷವನ್ನು ಅಪಹರಿಸಿ, ಭೂಮಿಗೆ ತಂದು, ಪ್ರಿಯಪತ್ನಿಗೆ ನೀಡಿದನು. ದೇವರ್ಷಿಗಳಾದ ನಾರದರಿಗೆ ತನ್ನ ಮಹಿಮಾತಿಶಯಗಳನ್ನು ತೋರಿಸಿ ಅವರಿಂದ ಸ್ತುತ್ಯನಾದನು. ಅನಂತರ ಭೂದೇವಿಯ ಕುಮಾರನಾದ ನರಕಾಸುರನನ್ನು ಸಂಹಾರ ಮಾಡಿ, ಅವನು ಬಂಧಿಸಿಟ್ಟಿದ್ದ ಹದಿನಾರು ಸಾವಿರದ ನೂರಜನ ರಾಜಕುಮಾರಿಯರನ್ನು ವಿವಾಹವಾದನು. ಪ್ರಿಯಸಖನೂ, ಇಂದ್ರಕುಮಾರನೂ ಆದ ಅರ್ಜುನನಿಗೆ ತನ್ನ ಸಹೋದರಿಯಾದ ಸುಭದ್ರಾದೇವಿಯನ್ನು ಕೊಟ್ಟು ವಿವಾಹ ಮಾಡಿಸಿದನು. ಇಂತು ಬ್ರಹ್ಮ-ರುದ್ರ-ಇಂದ್ರಾದಿ ದೇವತೆಗಳಿಗೆ ನಿಯಾಮಕನೂ, ಮಹಾಮಹಿಮನೂ ಆದ ಶ್ರೀಕೃಷ್ಣನು ನಮ್ಮನ್ನು ರಕ್ಷಿಸಲಿ.

ಪಾರ್ಥಾನ್ ಲಬ್ಧಸಭಾನ್ ವಿಧಾಯ ಮಯತಃ ಪ್ರಾಪ್ತಃ ಪುರಂ ಸ್ವಂ ಗತಃ
ಕ್ಷೇತ್ರಂ ಕೌರವಮರ್ಕಪರ್ವಣಿ ಪುರೀಂ ಸಮ್ಪ್ರಾಪ್ಯ ಕರ್ತಾ ಕ್ರತೋಃ |
ಪಾಣ್ಡೂನ್ ಪ್ರಾಪ್ಯ ಜರಾಸುತೇ ವಿನಿಹತೇ ತೈಃ ಕಾರಯಿತ್ವಾಽಧ್ವರಮ್
ಪ್ರಾಪ್ತಃ ಸ್ವಂ ಪುರಮಚ್ಯುತೋ ವಿಜಯತೇ ದ್ಯೂತೇ ಜಿತೈಶ್ಚ ಸ್ಮೃತಃ || 21 ||

ಇಂದಿರಾಹೃದಯವಲ್ಲಭನಾದ, ಶ್ರೀಕೃಷ್ಣ ಪರಮಾತ್ಮನು, ಮಯಾಸುರನಿಂದ ಪಾಂಡವರಿಗಾಗಿ ಒಂದು ಅತಿಮನೋಹರವೂ, ಕಲಾಪ್ರಪೂರ್ಣವೂ ಆದ ಸಭೆಯನ್ನು ನಿರ್ಮಾಣ ಮಾಡಿಸಿ, ಅವರಿಗೆ ಕೊಟ್ಟು, ದ್ವಾರಕಾಪುರಿಗೆ ಹಿಂದಿರುಗಿ ಬಂದನು. ಪುನಃ ಆ ಸ್ವಾಮಿಯು ಸೂರ್ಯಗ್ರಹಣಕಾಲದಲ್ಲಿ ಕುರುಕ್ಷೇತ್ರಕ್ಕೆ ದಯಮಾಡಿಸಿ, ಗ್ರಹಣಕಾಲದಲ್ಲಿ ನೆರವೇರಿಸಬೇಕಾಗಿರುವ ವಿಧಿಗಳನ್ನು ಮಾಡಿ, ಮತ್ತೆ ದ್ವಾರಕಾಪುರಿಗೆ ಬಂದನು. ಅಲ್ಲಿ ಶ್ರೀಕೃಷ್ಣನು ಅತ್ಯಂತ ಶ್ರೇಷ್ಠವಾದ ಯಾಗವನ್ನು ನೆರವೇರಿಸಿ, ಪಾಂಡವರನ್ನು ನೋಡಲು ಇಂದ್ರಪ್ರಸ್ಥಕ್ಕೆ ಆಗಮಿಸಿ, ರಾಜಸೂಯ ಯಾಗವು ಸುಗಮನವಾಗಿ ಜರುಗಿಸಿ, ಪಾಂಡವರಿಗೆ ಕೀರ್ತಿ ಬರುವಂತೆ ಮಾಡಲು, ಅದಕ್ಕೆ ಅಡ್ಡಿಯಾಗಿದ್ದ ಜರಾಸಂಧನನ್ನು ಸಂಹಾರ ಮಾಡಿಸಿ, ಮತ್ತೆ ಇಂದ್ರಪ್ರಸ್ತಕ್ಕೆ ಬಂದು, ಪಾಂಡವರಿಂದ ವೈಭವಪೂರ್ಣವಾಗಿ ರಾಜಸೂಯಯಾಗವನ್ನು ಯಶಸ್ವಿಯಾಗಿ ಮಾಡಿಸಿ, ಅವರಿಗೆ ಕೀರ್ತಿ ಬರುವಂತೆ ಮಾಡಿ, ಪುನಃ ದ್ವಾರಕೆಗೆ ಹಿಂದಿರುಗಿದನು. ಇತ್ತ ದುರ್ಯೋಧನನು ಪಾಂಡವರ ವೈಭವ, ಸಂಪತ್ತು, ಕೀರ್ತಿಗಳನ್ನು ಕಂಡು, ಮಾತ್ಸರ್ಯದಿಂದ ಕರುಬಿ, ಅವರ ರಾಜ್ಯ-

ಸಂಪತ್ತಗಳನ್ನು ಕಬಳಿಸಲು, ಶಕುನಿಯಿಂದ ಪ್ರೇರಿತನಾಗಿ, ಪಾಂಡವರನ್ನು ಹಸ್ತಿನಾವತಿಗೆ ಕರೆಸಿಕೊಂಡು, ಶಕುನಿಯ ದ್ವಾರಾ ಕಪಟದ್ಯೂತದಲ್ಲಿ ಪರಾಜಿತರಾದ ಪಾಂಡವರ ಸರ್ವಸ್ವವನ್ನೂ ಅಪಹರಿಸಿ, ಪಾಂಡವರನ್ನು ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸ ಮಾಡಲು ಅರಣ್ಯಕ್ಕೆ ಅಟ್ಟಿದನು. ಧರ್ಮವಂತರಾದ ಪಾಂಡವರು, ಪಣಬಂಧದಂತೆ ವನವಾಸಕ್ಕಾಗಿ ಅರಣ್ಯಕ್ಕೆ ತೆರಳಿ, ಅಲ್ಲಿ ತಮ್ಮ ಹಿತಚಿಂತಕನೂ, ಬಂಧುವೂ, ಸ್ವಾಮಿಯೂ, ಆದ ಶ್ರೀಕೃಷ್ಣನನ್ನು ಸ್ಮರಿಸಿದರು. ಇಂತು ಪಾಂಡವರಿಂದ ಸ್ಮರಿಸಲ್ಪಟ್ಟ ಚ್ಯುತಿರಹಿತನಾದ ಶ್ರೀಕೃಷ್ಣನು ಸದಾ ಉತ್ಕೃಷ್ಟನಾಗಿದ್ದಾನೆ.

ಪಾರ್ಥಾ ಯಾತಾ ಅರಣ್ಯಂ ನಿಹಿತನಿಶಿಚರಾಃ ಪ್ರೀಣಯನ್ತೋ ದ್ವಿಜೌಘಾನ್
ವಾರ್ತಾಂ ಶ್ರುತ್ವಾ ಸ್ವಕೀಯಾಮುಪಗತಹರಿಣಾ ಮಾನಿತಾ ಸಿನ್ಧುರಾಜಮ್ |
ಜಿತ್ವಾ ದುರ್ಯೋಧನಾದೀನ್ ಹರಿಹಯಪುರುಷವ್ರಾತಬದ್ಧಾನ್ ವಿಮೋಚ್ಯ
ಪ್ರಾಪ್ತಾ ಧರ್ಮಪ್ರಸಾದಾಂ ಯಮಥ ಮುರರಿಪುಂ ತುಷ್ಟುವುಸ್ತಂ ಪ್ರಪದ್ಯೇ || 22 ||

ಕುಂತೀಕುಮಾರರಾದ ಪಾಂಡವರು, ದುರ್ಯೋಧನನು ಏರ್ಪಡಿಸಿದ ಕಪಟದ್ಯೂತದಲ್ಲಿ, ವಂಚಕನಾದ ಶಕುನಿಯಿಂದ ಪರಾಜಿತರಾಗಿ, ಪಣಬಂಧದಂತೆ ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸ ಮಾಡಲೊಪ್ಪಿ, ಅರಣ್ಯವಾಸಿಗಳಾದರು. ಮತ್ತು ಅಲ್ಲಿ ಲೋಕಕಂಟಕರಾಗಿದ್ದ ಕಮ್ಮೀರ ಮೊದಲಾದ ರಾಕ್ಷಸರನ್ನು ಸಂಹಾರಮಾಡಿ, ಅರಣ್ಯದಲ್ಲಿ ಆಶ್ರಮವಾಸಮಾಡುತ್ತಿದ್ದ ಋಷಿ-ಮುನಿಗಳೇ ಮುಂತಾದ ಭೂಸುರರನ್ನು ಸಂತೋಷಪಡಿಸಿದರು. ತರುವಾಯ, ತಾವು ಪಗಡೆಯಾಟದಲ್ಲಿ ಸೋತು, ವನಕ್ಕೆ ಬಂದಿರುವ ವಿಚಾರವರಿತು, ತಮ್ಮನ್ನು ಕಾಣಲು ಬಂದ, ಶ್ರೀಕೃಷ್ಣ ಪರಾಮಾತ್ಮನಲ್ಲಿ ಎಲ್ಲ ವಿಚಾರಗಳನ್ನೂ ವಿಜ್ಞಾಪಿಸಿದರು. ಶ್ರೀ ಹರಿಯು ಅವರನ್ನು ಸಮಾಧಾನಪಡಿಸಿ, ಮುಂದೆ ಜಯವು ನಿಮಗೆ ನಿಶ್ಚಯವೆಂದು ಸಂತೋಷ ವಚನಗಳಿಂದ ಸನ್ಮಾನಿಸಿದನು. ಅನಂತರ, ದುರ್ಯೋಧನನ ತಂಗಿಯ ಪತಿಯಾದ, ಜಯದ್ರಥನು ಅರಣ್ಯಕ್ಕೆ ಬಂದು, ಯಾರೂ ಇಲ್ಲದಿರುವ ಸಮಯ ನೋಡಿ ಸಾಧ್ವಿಯಾದ ದ್ರೌಪದಿಯನ್ನು ಕೆಣಕಿ ಅಪಹರಿಸಲೆತ್ನಿಸಿದಾಗ, ಭೀಮಾದಿಗಳು ಅವನನ್ನು ಯುದ್ಧದಲ್ಲಿ ಸೋಲಿಸಿ, ಕ್ಷಮಿಸಿ ಕಳಿಸಿದರು. ಇದಾದಮೇಲೆ ತಮ್ಮ ಸಿರಿಸಂಪತ್ತು-ವೈಭವಾದಿಗಳನ್ನು ಪ್ರದರ್ಶಿಸಿ ಪಾಂಡವರಿಗೆ ನೋವುಂಟು ಮಾಡಲು, ಘೋಷಯಾತ್ರೆಯ ನೆಪದಿಂದ, ಪಾಂಡವರಿದ್ದ ವನಕ್ಕೆ ಬಂದ ದುರ್ಯೋಧನಾದಿಗಳು, ಉನ್ಮತ್ತರಾಗಿ ಗಂಧರ್ವರನ್ನು ಕೆಣಕಿದಾಗ, ಪಾಂಡವರ ಶತ್ರುಗಳಾದ ಕೌರವರಿಗೆ, ಬುದ್ಧಿ ಕಲಿಸುವಂತೆ ದೇವೇಂದ್ರನಿಂದ ಪ್ರೇರಿತನಾದ ಚಿತ್ರರಥಾದಿ ಗಂಧರ್ವರು, ಸಮಸ್ತ ಕೌರವರನ್ನೂ ಯುದ್ಧದಲ್ಲಿ ಜಯಿಸಿ, ದುರ್ಯೋಧನಾದಿಗಳನ್ನು ಹೆಡಮುರುಗೆಗಟ್ಟಿ, ರಥದಲ್ಲಿ ಹೋಗುತ್ತಿರುವಾಗ, ಧರ್ಮರಾಜನ ಅಣತಿಯಂತೆ ಭೀಮಾರ್ಜುನಾದಿಗಳು, ಗಂಧರ್ವರನ್ನು ತಡೆದು, ಜಯಿಸಿ, ದುರ್ಯೋಧನಾದಿಗಳನ್ನು

ಬಂಧನದಿಂದ ಬಿಡಿಸಿದರು. ಅನಂತರ, ಯಮಧರ್ಮನ ಅನುಗ್ರಹವನ್ನು ಸಂಪಾದಿಸಿ, ಶ್ರೀಕೃಷ್ಣನನ್ನು ಸ್ತುತಿಸಿದರು. ಇಂತು ಪಾಂಡವರಿಂದ ಸ್ತುತನಾದ ಶ್ರೀಕೃಷ್ಣಪರಮಾತ್ಮನಿಗೆ ಶರಣು ಹೋಗುತ್ತೇನೆ.

ಅನ್ಯಂ ವೇಷಮುಪಾಗತಾಃ ಪೃಥಗಿತೋ ಗತ್ವಾ ವಿರಾಟಾಲಯಂ
ತದ್ದೇಹಸ್ಥಹರೇರ್ನಿಷೇವಣಪರಾಃ ಮಲ್ಲಂ ತಥಾ ಕೀಚಕಾನ್ ।
ಹತ್ವಾ ಗೋಗ್ರಹಣೋದ್ಯತಾನಪಿ ಕುರೂನ್ ಜಿತ್ವಾ ವಿರಾಟಾರ್ಚಿತಾಃ
ಪಾರ್ಥಾಃ ಸ್ವಾನ್ತಿಕಮಾಗತಂ ಯಮಜಿತಂ ಭೇಜುಸ್ತಮೀಡೇಽಚ್ಯುತಮ್ ॥ 23 ॥

ಪಾಂಡವರು, ತಾವು ಪ್ರತಿಜ್ಞೆ ಮಾಡಿದ ಪ್ರಕಾರವಾಗಿ, ಅರಣ್ಯದಲ್ಲಿ ಹನ್ನೆರಡು ವರ್ಷಕಾಲ ಶ್ರೀಹರಿಯ ಅನುಗ್ರಹದಿಂದ ವಾಸಮಾಡಿ, ಅನಂತರ ತಮ್ಮ ವೇಷವನ್ನು ಮರೆಮಾಚಿಕೊಂಡು, ಅಂದರೆ ವೇಷಾಂತರದಿಂದ, ಅಜ್ಞಾತವಸಕ್ಕಾಗಿ ಬೇರೆಬೇರೆಯಾಗಿ ವಿರಾಟನಗರಕ್ಕೆ ಬಂದು, ಅಲ್ಲಿ ವಿರಾಟರಾಜನ ಅರಮನೆಯಲ್ಲಿ ವಿವಿಧ ಉದ್ಯೋಗಗಳನ್ನು ದೊರಕಿಸಿಕೊಂಡು, ವಿರಾಟರಾಜನ ದೇಹದಲ್ಲಿ ಅಂತರ್ಗತನಾಗಿರುವ, ಶ್ರೀಕೃಷ್ಣ ಪರಮಾತ್ಮನನ್ನು ಸೇವಿಸುತ್ತಿದ್ದರು. ಹೀಗಿರಲೊಂದು ದಿನ, ಓರ್ವ ಜಗಜಟ್ಟಿಯು ವಿರಾಟನಗರಕ್ಕೆ ಬಂದು, ಅವನ ಆಸ್ಥಾನದ ಜಟ್ಟಿಗಳನ್ನು ಮಲ್ಲಯುದ್ಧಕ್ಕೆ ಆಹ್ವಾನಿಸಿದಾಗ, ಅವನ ದೇಹಶಕ್ತಿಗಳನ್ನು ಕಂಡು, ಆಸ್ಥಾನದ ಮಲ್ಲರೆಲ್ಲರೂ ಓಡಿಹೋದರು. ಆಗ ರಾಜನ ಗೌರವವನ್ನು ಕಾಪಾಡಲು, ವಲಲನ ವೇಷದಲ್ಲಿದ್ದ ಭೀಮಸೇನನು, ಆ ಜಗಜಟ್ಟಿಯೊಡನೆ ಮಲ್ಲಯುದ್ಧ ಮಾಡಿ, ಅವನನ್ನು ಸಂಹರಿಸಿದನು. ವಿರಾಟನ ಭಾವಮೈದುನನಾದ, ಮಹಾವಿರನಾದ ಕೀಚಕನು, ದ್ರೌಪದಿಯನ್ನು ಕಾಮಿಸಿ ಕೆಣಕಿದಾಗ, ಭೀಮನು ಅವನನ್ನು ಸಂಹಾರ ಮಾಡಿದನು. ಅದರಿಂದ ಅಂದರೆ ದ್ರೌಪದಿ (ಸೈರಂಧ್ರಿ)ಯ ಕಾರಣದಿಂದಾಗಿ, ತಮ್ಮ ಅಣ್ಣನು ಮೃತನಾದನೆಂಬ ಕೋಪದಿಂದ, ಉಪಕೀಚಕರು ದ್ರೌಪದಿಯನ್ನು ಕೀಚಕನ ಮೃತಶರೀರದೊಡನೆ ಸುಡಲು ಯತ್ನಿಸಿದಾಗ, ಭೀಮನು ಆ ಎಲ್ಲ ಉಪಕೀಚಕರನ್ನೂ ಕೊಂದನು. ಇತ್ತ ದುರ್ಯೋಧನಾದಿಗಳು ಮಲ್ಲ ಮತ್ತು ಕೀಚಕನನ್ನು ಸಂಹರಿಸಲು ಭೀಮನಲ್ಲದೇ ಬೇರೊಬ್ಬರಿಂದ ಸಾಧ್ಯವಿಲ್ಲವಾದ್ದರಿಂದ, ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸಮಾಡುತ್ತಿದ್ದಾರೆಂದು ನಿಶ್ಚಯಿಸಿ, ಅವರನ್ನು ಕಂಡುಹಿಡಿದು ಮತ್ತೆ ವನವಾಸಕ್ಕೆ ಅಟ್ಟಬೇಕೆಂದು, ದುರಾಗ್ರಹದಿಂದ ಗೋಗ್ರಹಣದ ನೆಪದಿಂದ ಸೈನ್ಯಸಮೇತರಾಗಿ, ವಿರಾಟನಗರಕ್ಕೆ ಬಂದು, ವಿರಾಟ ರಾಜನ ಗೋಸಂಪತ್ತನ್ನು ಅಪಹರಿಸಿಕೊಂಡು ಹೊರಟರು. ಅಜ್ಞಾತವಾಸಾವಧಿಯು ಮುಗಿದಿದ್ದರಿಂದ, ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನನು, ಉತ್ತರಕುಮಾರನನ್ನು ಸಾರಥಿಯಾಗಿ ಮಾಡಿಕೊಂಡು, ಭೀಷ್ಮ-ದ್ರೋಣ ಕರ್ಣ ಹಾಗೂ ದುರ್ಯೋಧನಾದಿ ಸಮಸ್ತ ಕೌರವರನ್ನೂ ಜಯಿಸಿ, ಗೋಸಂಪತ್ತನ್ನು ಅವರಿಂದ ಬಿಡಿಸಿ, ವಿರಾಟನಿಗೆ ಅರ್ಪಿಸಿದನು. ಅನಂತರ ಪಾಂಡವರ

ನಿಜವೃತ್ತಾಂತವನ್ನು ತಿಳಿದ ವಿರಾಟರಾಜನು, ಅವರನ್ನು ಚೆನ್ನಾಗಿ ಪೂಜಿಸಿದನು. ತರುವಾಯ ತಮ್ಮನ್ನು ಕಾಣಲು ಬಂದ, ಅಚ್ಯುತನಾದ, ಶ್ರೀಕೃಷ್ಣನನ್ನು ಪಾಂಡವರು ಪೂಜಿಸಿದರು. ಇಂತು ಪಾಂಡವರಿಂದ ಪೂಜಿತನಾದ ಭಗವಾನ್ ಶ್ರೀಕೃಷ್ಣನನ್ನು ಭಜಿಸುತ್ತೇನೆ.

ಯತ್ಸಂಮ್ಮತಾ ಪೃಷತತನುಜಪ್ರೇಷಿತತಬ್ರಾಹ್ಮಣೋಕ್ತ್ಯಾ
ರಾಜ್ಯಂ ನಾದಾದನುಜಜನಿತಶ್ಚಾಂಬಿಕೇಯೋಽನುಜಸ್ಯ |
ಯತ್ಸಾಹಾಯ್ಯಂ ವ್ಯಧಿತ ನಗರೀಂ ಕೌರವಾಣಾಮವಾಪ್ತಃ
ಸ್ವೋಕ್ತೇ ಕೃಷ್ಣಸ್ತದನಭಿಮತೇಽವಾಪ್ತಪಾರ್ಥಃ ಸ ನೋಽವ್ಯಾತ್ || 24 ||

ಶ್ರೀಕೃಷ್ಣಪರಮಾತ್ಮನ ಒಪ್ಪಿಗೆಯಂತೆ ದ್ರುಪದರಾಜನು, ಧೃತರಾಷ್ಟ್ರನಿಗೆ, ಪೂರೋಹಿತರಾದ ಧೌಮ್ಯಾಚಾರ್ಯರ ಮೂಲಕವಾಗಿ, ಪಾಂಡುನಂದನರಿಗೆ ರಾಜ್ಯವನ್ನು ಕೊಟ್ಟು, ಅವರೊಡನೆ ಮೈತ್ರಿಯಿಂದಿರಬೇಕೆಂದು ಹೇಳಿ ಕಳಿಸಿದನು. ಆದರೆ ಅಂಬಿಕೆಯ ಸುತನಾದ ಧೃತರಾಷ್ಟ್ರನು, ತನ್ನ ತಮ್ಮನ ಮಗನಾದ ಧರ್ಮರಾಜನಿಗೆ, ರಾಜ್ಯವನ್ನು ಕೊಡಲಿಲ್ಲ. ಅಂದರೆ ರಾಜ್ಯವನ್ನು ಕೊಡಲು ಒಪ್ಪಲಿಲ್ಲ. ಆದ್ದರಿಂದ, ಪಾಂಡವರಿಗೆ ಸಹಾಯ ಮಾಡಲು, ಸ್ವತಃ ದೂತನಾಗಿ ಭಗವಾನ್ ಶ್ರೀಕೃಷ್ಣನು, ಹಸ್ತಿನಾವತಿಗೆ ಹೋಗಿ ರಾಜಸಭೆಯಲ್ಲಿ ಧೃತರಾಷ್ಟ್ರಾದಿಗಳಿಗೆ, ಪಾಂಡವರು ತಮ್ಮ ಮಾತಿನಂತೆ ಹನ್ನೆರಡು ವರ್ಷ ಅರಣ್ಯವಾಸ, ಒಂದು ವರ್ಷ ಅಜ್ಞಾತವಾಸವನ್ನು ಪೂರೈಸಿದ್ದಾರೆ. ಆದ್ದರಿಂದ, ನೀನೂ ಸಹ ಮಾತಿನಂತೆ, ಅವರದಾದ ರಾಜ್ಯವನ್ನು ಒಪ್ಪಿಸಿಕೊಡು ಎಂದು ಹೇಳಿದನು. ಅದನ್ನು ಧೃತರಾಷ್ಟ್ರ ದುರ್ಯೋಧನಾದಿಗಳು ತಿರಸ್ಕರಿಸಿದ್ದರಿಂದ, ಪುನಃ ಅವರಿಗೆ (ಪಾಂಡವರಿಗೆ) ತಿಳಿಸಿದನು. ಇಂತಹ ಶ್ರೀಕೃಷ್ಣಪರಮಾತ್ಮನು ನಮ್ಮನ್ನು ರಕ್ಷಿಸಲಿ.

ಸೇನೇ ವೀಕ್ಷ್ಯ ರಣೋನ್ಮುಖೇ ಕರುಣಯಾ ಶಸ್ತ್ರೋಜ್ಝಿತಂ ಫಲ್ಗುಣಂ
ಸದ್ಗೀತಾಮುಪದಿಶ್ಯ ಕಾರ್ಮುಕಧರಂ ಚಕ್ರೇಽಸ್ಯ ಯಃ ಸಾರಥಿಃ |
ಅನ್ಯೋನ್ಯಂ ಕುರುಪಾಣ್ಡವೈಶ್ಚ ಪೃತನಾಂ ಯೋಽಜೀಷಯತ್ ಸ್ಯನ್ದನಾತ್ |
ಯೋ ಭೀಷ್ಮಂ ನಿರಪಾತಯತ್ ಸುತಶರೈಃ ಪಾರ್ಣ್ಡೋಸ್ತಮೀಡೇಽಚ್ಯುತಮ್ || 25 ||

ಕುರುಕ್ಷೇತ್ರದಲ್ಲಿ ಕೌರವ-ಪಾಂಡವರ ಸೈನ್ಯವು ಮಿಳಿತವಾಗಿದೆ. ಉಭಯ ಸೈನ್ಯದವರೂ ಪರಸ್ಪರ ಯುದ್ಧ ಮಾಡಲು ಸನ್ನದ್ಧರಾಗಿದ್ದಾರೆ. ಆಗ ತಾನೆ ರಣರಂಗವನ್ನು ಪ್ರವೇಶಿಸಿದ ಮಧ್ಯಮಪಾಂಡವ ಅರ್ಜುನನು ರಥದಲ್ಲಿ ಕುಳಿತಂತೆಯೇ ಆ ದೃಶ್ಯವನ್ನು ನೋಡಿ, ಬಂಧು-ಬಾಂಧವರು ಪರಸ್ಪರ ಯುದ್ಧಮಾಡಿ ಹತರಾಗುವರಲ್ಲಾ, ಎಂಬ ಕಾರುಣ್ಯದಿಂದ ವಿಷಣ್ಣನಾಗಿ " ನಾನು ಯುದ್ಧಮಾಡುವಿದಿಲ್ಲ "ವೆಂದು ಹೇಳಿ ಧನುರ್ಬಾಣಗಳನ್ನು ತ್ಯಜಿಸಿ ಚಿಂತಾಕ್ರಾಂತನಾಗಿ ಕುಳಿತನು. ಆಗ ಶ್ರೀಕೃಷ್ಣ ಪರಮಾತ್ಮನು ಧನಂಜಯನಿಗೆ ಗೀತೋಪದೇಶ ಮಾಡಿ, ಅರ್ಜುನ ! ಕ್ಷತ್ರಿಯರಿಗೆ ಯುದ್ಧವು ಸ್ವಧರ್ಮವಾಗಿದೆ. ಅದನ್ನು ನಿರ್ವಹಿಸದಿದ್ದಲ್ಲಿ ಅನರ್ಥಕ್ಕೆ ಭಾಗಿಯಾಗಬೇಕಾಗುತ್ತದೆ. ಈ

ಯುದ್ಧ, ಕೊಲ್ಲುವುದು, ಇವೆಲ್ಲವೂ ನನ್ನಿಂದಲೇ ಜರುಗುವುದು. ಕೊಲ್ಲಲು ನೀನಾರು ? ಎಲ್ಲಕ್ಕೂ ನಾನೇ ಕಾರಣನು. ನಿನ್ನ ಸ್ವಧರ್ಮವಾದ ಯುದ್ಧರೂಪ ಕರ್ತವ್ಯವನ್ನು ನೆರವೇರಿಸು – ಮುಂತಾಗಿ ಉಪದೇಶಿಸಿ ಪಾರ್ಥನಿಗೆ ತನ್ನ ವಿಶ್ವರೂಪವನ್ನು ತೋರಿಸಿ " ಕರಿಷ್ಯೇ ವಚನಂ ತವ" - "ಕೃಷ್ಣ ! ನಿನ್ನ ಮಾತಿನಂತೆ ವರ್ತಿಸುತ್ತೇನೆ. ಯುದ್ಧಮಾಡುತ್ತೇನೆ ಎಂದು ಹೇಳಿ ಮತ್ತೆ ಧನುರ್ಬಾಣಗಳನ್ನು ಧರಿಸುವಂತೆ ಮಾಡಿದನು. ಇಂದು ಮಾಡಿದ, ಅರ್ಜುನನ ಸಾರಥಿಯಾದ, ಭಗವಾನ್ ಶ್ರೀಕೃಷ್ಣನು ಕುರುಪಾಂಡವರ ಯುದ್ಧದಲ್ಲಿ, ಪಾಂಡವರು ಗೆಲ್ಲುವಂತೆ ಮಾಡಿದನು. ಪುನಃ ಯುದ್ಧದಲ್ಲಿ ಪಾಂಡುಕುಮಾರನಾದ ಅರ್ಜುನನ ಬಾಣಗಳಿಂದ, ರಥದಿಂದ ಭೀಷ್ಮಾಚಾರ್ಯರನ್ನು ಕೆಳಗೆ ಕೆಡಹಿಸಿದನು. ಅಂತಹ ಚ್ಯುತಿರಹಿತನಾದ ಶ್ರೀಕೃಷ್ಣನನ್ನು ಭಜಿಸುತ್ತೇನೆ.

ದ್ರೋಣೇ ಯುಧ್ಯತಿ ಪಾಣ್ಡವೈರ್ವಿನಿಹತಂ ಪ್ರಾಗ್ಜ್ಯೋತಿಷಂ ಪಾರ್ಥತಃ
ಕೃತ್ವಾ ತಸ್ಯ ಸುತೇ ಹತೇ ನಿಶಿ ಶಿವಂ ನೀತ್ವಾಽರ್ಜುನಂ ಸೈನ್ಧವಮ್ ।
ತದ್ಧತ್ವಾಸ್ತ್ರಬಲಾದಜೀಘನದತೋ ದ್ರೌಣೇ ಹತೇ ದ್ರೌಪದೇಃ
ಯೋ ಭೀಮಂ ಚ ನಿಜಾಸ್ತ್ರನಮ್ರಮಕರೋತ್ ತಂ ನೌಮಿ ನಾರಾಯಣಮ್ ॥ 26 ॥

ಪಿತಾಮಹರಾದ ಭೀಷ್ಮಾಚಾರ್ಯರ ಪತನಾನಂತರ ದುರ್ಯೋಧನನು, ಶಸ್ತ್ರವಿದ್ಯಾಚಾರ್ಯರಾದ ದ್ರೋಣಾಚಾರ್ಯರನ್ನು, ಮಹಾರಣರಂಗದಲ್ಲಿ ಸೇನಾಧಿಪತಿಗಳನ್ನಾಗಿ ಮಾಡಿದನು. ಆಗ ಪಾಂಡವರಿಗೂ, ದ್ರೋಣಾಚಾರ್ಯರಿಗೂ ಉಗ್ರವಾದ ಕದನವಾಯಿತು. ಆ ಸಮಯದಲ್ಲಿ ಮುಂದೆ ಬಂದು ಮಹಾಬಲಪ್ರದರ್ಶನಮಾಡಿದ, ಪ್ರಾಗ್ಜ್ಯೋತಿಷರಾಜ್ಯಾಧಿಪತಿಯಾದ ಭಗದತ್ತನನ್ನು ಶ್ರೀವಾಸುದೇವನು, ಅರ್ಜುನನಿಂದ ಸಂಹಾರ ಮಾಡಿಸಿದನು. ಆ ತರುವಾಯ ದ್ರೋಣಾಚಾರ್ಯರು ನಿರ್ಮಿಸಿದ ಪದ್ಮವ್ಯೂಹವನ್ನು ಮುರಿದು ಅಭಿಮನ್ಯುವು, ಬಹುಪರಾಕ್ರಮದಿಂದ ಕಾದಾಡುತ್ತಿರಲು, ರುದ್ರದೇವರ ವರಬಲದಿಂದ, ಅಭಿಮನ್ಯುವಿಗೆ ಸಹಾಯಕರಾಗಿ ಬಂದ ಭೀಮಸೇನಾದಿಗಳನ್ನು ಪದ್ಮವ್ಯೂಹ ದ್ವಾರದಲ್ಲಿ ಪ್ರವೇಶಿಸದಂತೆ, ಸೈಂಧವನು ತಡೆದನು. ಆ ಕಾರಣದಿಂದಾಗಿ ಅಭಿಮನ್ಯುವು ಕೌರವರ ಸಮಸ್ತ ಮಹಾರಥಿಗಳಾದ ದ್ರೋಣ-ಕರ್ಣಾದಿಗಳ ಅಧರ್ಮಾಚರಣೆಯಿಂದ, ಆ ಧರ್ಮಯುದ್ಧದಲ್ಲಿ ಏಕಾಂಗಿಯಾಗಿ ಹೋರಾಡಿ, ಮೃತನಾದನು. ಇದರಿಂದ ಕೆರಳಿದ ಅರ್ಜುನನು " ನಾಳೆ (ಮರು ದಿನ) ಸೂರ್ಯನು ಅಸ್ತಂಗತನಾಗುವುದರೊಳಗೆ ಸೈಂಧವನನ್ನು ಸಂಹರಿಸುವೆನು, ಅದು ಆಗದಿದ್ದಲ್ಲಿ ಅಗ್ನಿಪ್ರವೇಶಮಾಡುತ್ತೇನೆ " ಎಂದು ಘೋರ ಪ್ರತಿಜ್ಞೆ ಮಾಡಿದನು.

ಯತ್ಸಾಮರ್ಥ್ಯಬಲೇನ ಸೂರ್ಯತನುಜೇ ಪಾರ್ಥೇನ ಯುದ್ಧೇ ಜಿತೇ
ಪಶ್ಚಾಚ್ಛಲ್ಯಮವಾಪ್ಯ ಸಾರಥಿವರಂ ಧರ್ಮಾತ್ಮಜಂ ಸಾಯಕೈಃ |
ಶೀರ್ಣಾಙ್ಗಂ ಕೃತವತ್ಯಮುಂ ಶಿಬಿರಗಂ ಪಾರ್ಥಂ ಚ ಮೃತ್ಯೋರಪಾತ್
ಯಃ ಪಾರ್ಥೇನ ಹತೇಽರ್ಕಜೇ ನೃಪನುತಃ ಪಾಯತ್ ಸ ನಃ ಕೇಶವಃ || 27 ||

ಕುರುಕ್ಷೇತ್ರದಲ್ಲಿ ಅರ್ಜುನನು, ಶ್ರೀಕೃಷ್ಣನ ಅಪರಿಮಿತ ಶಕ್ತಿಯ ಸಹಾಯದಿಂದ, ಸೂರ್ಯಸುತನಾದ ಅಂಗರಾಜನಾದ ಕರ್ಣನನ್ನು ಸೋಲಿಸಿದನು. ಆ ತರುವಾಯ ಮದ್ರದೇಶಾಧಿಪತಿಯಾದ, ಶ್ರೇಷ್ಠ ಸಾರಥಿಯಾದ ಶಲ್ಯರಾಜನನ್ನು, ತನ್ನ ಸಾರಥಿಯನ್ನಾಗಿ ಪಡೆದ ಕರ್ಣನು, ಧರ್ಮರಾಜನನ್ನು ಶರಾಹತಿಗಳಿಂದ ಶಿಥಿಲದೇಹವುಳ್ಳವನನ್ನಾಗಿ ಮಾಡಿದನು. ಆಗ ಧರ್ಮನಂದನನು ಶಿಭಿರಕ್ಕೆ ಆಗಮಿಸಿ, ವಿಶ್ರಾಂತಿಯನ್ನು ಪಡೆದನು. ಆಗ ಧರ್ಮರಾಜನ ಕ್ಷೇಮಸಮಾಚಾರವನ್ನು ತಿಳಿಯಲು ಶ್ರೀಕೃಷ್ಣಾರ್ಜುನರು ಬಂದರು. ಅವರನ್ನು ನೋಡಿ, ಧರ್ಮರಾಜನು " ಕರ್ಣನನ್ನು ಸೋಲಿಸಿದೆಯಾ ? ಸಂಹರಿಸಿದೆಯಾ ? ಎಂದು ಪ್ರಶ್ನಿಸಲು, ಪಾರ್ಥನು ' ಅಣ್ಣಾ ನಾನು ಖಂಡಿತವಾಗಿ ಕರ್ಣನನ್ನು ಸೋಲಿಸುತ್ತೇನೆ' ಎಂದು ಹೇಳಿದಾಗ, ಯುಧಿಷ್ಠಿರನು " ! ನಿನಗೇತಕ್ಕೆ ಗಾಂಡೀವ ? ಅದನ್ನು ಬಿಸಾಡು " ಎಂದು ನಿಂದಿಸಿದನು. ಆಗ ಅರ್ಜುನನು, ಹಿಂದೆ " ನನ್ನ ಗಾಂಡೀವವನ್ನು ಅವಹೇಳನ ಮಾಡಿದವರನ್ನು ಸಂಹರಿಸುತ್ತೇನೆ " ಎಂದು ಪ್ರತಿಜ್ಞೆಯಾಡಿದ್ದರಿಂದ, ಗಾಂಡೀವವನ್ನು ನಿಂದಿಸಿದ, ಧರ್ಮರಾಜನನ್ನು ಸಂಹರಿಸಲು ಉದ್ಯುಕ್ತನಾದನು. ಆಗ ಶ್ರೀವಾಸುದೇವನು ಧನಂಜಯನನ್ನು ತಡೆದು, ಆ ದೋಷದಿಂದ ಅರ್ಜುನನನ್ನು ಮತ್ತು ಧರ್ಮರಾಜನನ್ನು ರಕ್ಷಿಸಿದನು. ಆಗ ಪಾರ್ಥನು ಅಣ್ಣನನ್ನೇ ಸಂಹರಿಸಲು ಮುಂದಾದೆನಲ್ಲಾ ಎಂದು ಕಡುನೊಂದು, ಭ್ರಾತೃವಧಪ್ರಯತ್ನ ಮತ್ತು ನಿಂದನೆಯ ಅಪರಾಧ ಮಾಡಿದಕ್ಕಾಗಿ, ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ಧನಾದಾಗ, ಶ್ರೀಕೃಷ್ಣನು " ಅರ್ಜುನ ! ತಡೆ, ತಡೆ, ಭ್ರಾತೃಹತ್ಯಾ ಪ್ರಯತ್ನದಿಂದ ಅಪರಾಧವಾಯಿತೆಂದು ಭಾವಿಸುವಿಯಾದರೆ ಆತ್ಮಸ್ತುತಿಯನ್ನು ಮಾಡಿಕೋ, ಅದು ಆತ್ಮಹತ್ಯೆಮಾಡಿಕೊಂಡಂತಾಗುವುದು", ಎಂದು ಹೇಳಿ ಅರ್ಜುನನು ಆತ್ಮಸ್ತುತಿ ಮಾಡಿಕೊಳ್ಳುವಂತೆ ಮಾಡಿ, ಅರ್ಜುನನ್ನು ಸಂರಕ್ಷಿಸಿದನು. ಹೀಗೆ ಧರ್ಮರಾಜ – ಅರ್ಜುನರಿಬ್ಬರನ್ನೂ ಮರಣದಿಂದ ಕಾಪಾಡಿದನು. ಆ ತರುವಾಯ ಅರ್ಜುನನು ಯುದ್ಧದಲ್ಲಿ ಕರ್ಣನನ್ನು ಸಂಹರಿಸಿದನು. ಅದರಿಂದ, ಪರಮಾನಂದಭರಿತನಾದ ಧರ್ಮರಾಜನು ಶ್ರೀ ಕೃಷ್ಣಪರಮಾತ್ಮನನ್ನು ಸ್ತುತಿಸಿದನು. ಇಂತಹ ಭಗವಾನ್ ಶ್ರೀಕೃಷ್ಣನ್ನು ನಮ್ಮನ್ನು ಕಾಪಾಡಲಿ.

ಶಲ್ಯೇ ಧರ್ಮಸುತಾದ್ಧತೇ ಕುರುಕುಲೇ ಪಾರ್ಥೈಃ ಸಮೂಹೇ ಹತೇ
ಭೀಮೇನಾನುಜಸಂಯುತೇ ವಿನಿಹತೇ ದುರ್ಯೋಧನೇ ದ್ರೋಣಿನಾ |
ಸುಪ್ತಾನಾಂ ನಿಧನೇ ಕೃತೇ ನಿಶಿ ತತೋ ಮುಕ್ತ್ವಾ ವಿಧೇರಸ್ತ್ರತಃ
ಪಾರ್ಥಾನ್ ರಾಜ್ಯಮಿತಾಂಶ್ಚ ತತ್ಸುತಸುತಂ ಯೋಽಧಾತ್ಸ ನೋಽವ್ಯಾದ್ಧರಿಃ || 28 ||

ಕುರುಕ್ಷೇತ್ರದ ರಣಭೂಮಿಯಲ್ಲಿ ಜರುಗಿದ ಯುದ್ಧದಲ್ಲಿ ಧರ್ಮರಾಜನು, ಮದ್ರದೇಶಾಧಿಪತಿಯಾದ ಶಲ್ಯರಾಜನನ್ನು ಸಂಹಾರಮಾಡಿದನು. ಪಾಂಡವರು ಸಮಸ್ತ ಕೌರವ ಕುಲದವರನ್ನು ಸಂಹರಿಸಿದರು. ಆ ತರುವಾಯ ಅರ್ಜುನ, ಧರ್ಮರಾಜ, ನಕುಲ, ಸಹದೇವರು ಮತ್ತು ಕೃಷ್ಣನಿಂದ ಸಹಿತನಾದ ವಾಯುಕುಮಾರನಾದ ಭೀಮಸೇನನು, ಗದಾಯುದ್ಧದಲ್ಲಿ ದುರ್ಯೋಧನನನ್ನು ಸಂಹಾರ ಮಾಡಿದನು. ಅಂದು ರಾತ್ರಿ ದುರ್ಯೋಧನನ ಪ್ರೇರಣೆಯಿಂದ, ಅಶ್ವತ್ಥಾಮನು, ಶಿಭಿರದಲ್ಲಿ ಮಲಗಿ ನಿದ್ರಿಸುತ್ತಿದ್ದ, ಉಪಪಾಂಡವಾದಿಗಳನ್ನು ನಾಶಪಡಿಸಿದನು. ಅದರಿಂದ ಪಾಂಡವರು ಶಸ್ತ್ರವನ್ನು ತ್ಯಜಿಸಿರುವಾಗ, ದ್ರೋಣಪುತ್ರನಾದ ಅಶ್ವತ್ಥಾಮನು, ಸಕಲ ಪಾಂಡವರ ನಾಶಕ್ಕಾಗಿ ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ, ರಾಜ್ಯವನ್ನು ಪಡೆದ ಪಾಂಡವರನ್ನೂ, ಪಾಂಡವಮಧ್ಯಮನಾದ ಅರ್ಜುನನ ಮಗನಾದ ಅಭಿಮನ್ಯುವಿನ ಪುತ್ರನಾದ ಪರೀಕ್ಷಿತ್ ರಾಜನನ್ನು (ಗರ್ಭಸ್ಥನಾಗಿದ್ದ ಪರೀಕ್ಷಿತನನ್ನು) ಯಾವ ಭಗವಾನ್ ಶ್ರೀಕೃಷ್ಣನು ಕಾಪಾಡಿದನೋ, ಅಂತಹ ಶ್ರೀಹರಿಯು ನಮ್ಮನ್ನು ಸಂರಕ್ಷಣಮಾಡಲಿ.

ಕೃಷ್ಣಾಭ್ಯಾಮಪಿ ಭೂಸುರೈರ್ನೃಪಸುತೋ ರಾಜ್ಯೇಽಭಿಷಿಕ್ತೋ ದ್ವಿಜೈಃ
ದಗ್ಧೇ ನಿನ್ದತಿ ಭಿಕ್ಷುಕೇ ಖಲತರೇ ಸ್ವಂ ವಿಪ್ರತೀಸಾರತಃ ।
ರಾಜ್ಯಂ ತ್ಯಕ್ತುಮಥೋದ್ಯತೋ ವಚನತೋ ಯಸ್ಯಾಪ್ತಭೀಷ್ಮಸ್ತತಃ
ಶುಶ್ರಾವಾಖಿಲಧರ್ಮನಿರ್ಣಯಮದಃ ಕೃಷ್ಣದ್ವಯಂ ಧೀಮಹಿ ॥ 29 ॥

ಆ ತರುವಾಯ ಪಾಂಡುಸುತನಾದ ಧರ್ಮರಾಜನು, ಶ್ರೀವಾಸಿಷ್ಠಕೃಷ್ಣ (ವೇದವ್ಯಾಸರು) ಯಾದವ ಕೃಷ್ಣರಿಂದ, ಮತ್ತು ಬ್ರಾಹ್ಮಣಶ್ರೇಷ್ಠರಿಂದ ಸಾಮ್ರಾಜ್ಯ ಸಿಂಹಾಸನದಲ್ಲಿ ಮತ್ತು ಭೀಮಸೇನನನ್ನು ಯುವರಾಜನ ಸ್ಥಾನದಲ್ಲಿ ಪಟ್ಟಾಭಿಷಿಕ್ತರಾದರು. ಅನಂತರ ಛದ್ಮವೇಷಧಾರಿಯಾಗಿ ಭಿಕ್ಷುಕ ರೂಪದಿಂದ ಬಂದ ದುರ್ಯೋಧನನ " ಮಿತ್ರನಾದ" ಎಂಬ ಅಸುರನು, ಧರ್ಮರಾಜನನ್ನು ನಿಂದಿಸುತ್ತಿರಲು, ಆ ಭಿಕ್ಷುಕನನ್ನು ಬ್ರಾಹ್ಮಣರು ಶಾಪಪ್ರದಾನದಿಂದ ದಗ್ಧಗೊಳಿಸಿದರು. ಆಗ ಧರ್ಮರಾಜನು ತನ್ನ ರಾಜಪಟ್ಟವನ್ನು (ರಾಜ್ಯವನ್ನು) ತ್ಯಜಿಸಲು ಉದ್ಯುಕ್ತನಾದನು. ಆನಂತರ, ಯಾವ ವೇದವ್ಯಾಸ ಶ್ರೀಕೃಷ್ಣರು ಹೇಳಿದಂತೆ, ಧರ್ಮರಾಜನು ಭೀಷ್ಮಾಚಾರ್ಯರಲ್ಲಿಗೆ ಹೋಗಿ, ಅವರಿಂದ ಸಮಸ್ತ ಧರ್ಮನಿರ್ಣಯಗಳನ್ನೂ ಕೇಳಿ, ತಿಳಿದುಕೊಂಡನೋ, ಅಂತಹ ವೇದವ್ಯಾಸದೇವರು ಮತ್ತು ಶ್ರೀಕೃಷ್ಣಪರಮಾತ್ಮನನ್ನು ಸ್ತೋತ್ರ ಮಾಡುತ್ತೇವೆ.

ಸ್ಮೃತ್ವಾ ಯಂ ದ್ಯುಸರಿತ್ಸುತೋವಸುರಭೂದ್ರಾಜಾ ಯದಾಶ್ವಾಸಿತಃ
ನಿರ್ದುಃಖೋಽಸಿ ಜುಗೋಪ ಧರ್ಮನಿರತೋ ಜಿತ್ವಾ ಸ್ವರಾಜ್ಯಂ ಕಲಿಮ್ |
ಯಃ ಪಾರ್ಥಂ ಸಮಬೋಧಯನ್ ಮೃತಶಿಶುಂ ಯೋಽಜೀವಯತ್ಪಾಣ್ಡವೈಃ
ಯೋ ಯಜ್ಞಂ ಸಮಕಾರಯದ್ಬಹುಧನೈಃ ಧ್ಯಾಯಾಮಿ ತಂ ಕೇಶವಮ್ || 30 ||

ಶರಪಂಜರ (ಮಂಚ)ದಲ್ಲಿ ಮಲಗಿದ್ದ ಪಿತಾಮಹ ಭೀಷ್ಮಾಚಾರ್ಯರು, ಇಚ್ಛಾಮರಣ ವರವನ್ನು ಪಡೆದವರಾದ್ದರಿಂದ, ಉತ್ತರಾಯಣವನ್ನು ನಿರೀಕ್ಷಿಸುತ್ತಿದ್ದು, ಶ್ರೀಕೃಷ್ಣನ ಆದೇಶದಂತೆ ಧರ್ಮನಂದನನಿಗೆ, ಅನೇಕ ತತ್ತ್ವಧರ್ಮಗಳನ್ನು ಉಪದೇಶಮಾಡಿ, ಸ್ವೇಚ್ಛೆಯಿಂದ, ದೇಹತ್ಯಾಗಮಾಡಿ, ತಮ್ಮ ಮೂಲರೂಪವಾದ ದ್ಯುನಾಮಕ ವಸುವಿನಲ್ಲಿ ಐಕ್ಯರಾದರು. ಪಿತಾಮಹರ ಮರಣದಿಂದ ಧರ್ಮರಾಜನು ಬಹುದುಃಖಿತನಾದನು. ಆಗ ಭಗವಾನ್ ಶ್ರೀಕೃಷ್ಣನು ಬಹುಪರಿಯಾಗಿ ಸಾಂತ್ವನಗೊಳಿಸಿದನು. ಅದರಿಂದ ಯುಧಿಷ್ಠಿರನು ಸಮಾಧಾನ ಪಡೆದು, ದುಃಖವನ್ನು ಬಿಟ್ಟು, ರಾಜ್ಯಭಾರ ಮಾಡಿದನು. ಅನಂತರ ಕಲಿಯು ತನ್ನ ಗುಣಗಳಿಂದ ಸಹಿತನಾಗಿ ಧರ್ಮರಾಜನ ರಾಜ್ಯದಲ್ಲಿ ಧರ್ಮಕಂಟಕ (ನಾಶಕ)ಕಾರ್ಯಾಸಕ್ತನಾಗಿ ಬಹುವಾಗಿ ಗೊಂದಲಮಾಡಲಾರಂಭಸಿದನು. ಅದರಿಂದ ಕುಪಿತನಾದ ಧರ್ಮರಾಜನು ಶ್ರೀಕೃಷ್ಣಸಹಿತನಾಗಿ ಕಲಿಯನ್ನು ಜಯಿಸಿದನು. ಶ್ರೀಕೃಷ್ಣನು ಭಾರತಾವನಿಯಲ್ಲಿ ಪಾಂಡವರ ಸಂತತಿಯು ಆಳುತ್ತಿರುವವರೆಗೂ, ಭೂಮಂಡಲದಲ್ಲಿ ಕಾಲಿಡಬಾರದೆಂದು ಶಾಸನ ಮಾಡಿದನು. ಆ ತರುವಾಯ ಯುಧಿಷ್ಠಿರನು ಧರ್ಮದಿಂದ ರಾಜ್ಯಭಾರವನ್ನು ಮಾಡುತ್ತಿದ್ದನು. ಅರ್ಜುನ, ಪುತ್ರನಾದ ಅಭಿಮನ್ಯುವಿನ ಮರಣದಿಂದ, ಅತ್ಯಂತ ವ್ಯಾಕುಲವುಳ್ಳವನಾಗಿ, ಪುತ್ರವಿಯೋಗದುಃಖದಿಂದ ಬಳಲುತ್ತಿರಲು, ಶ್ರೀಕೃಷ್ಣನು ತಾನು ಉಪದೇಶಿಸಿದ ಗೀತಾ ಉಪದೇಶವನ್ನು ಮರೆತಿರುವನೆಂದು ತಿಳಿದು, ಅವನಿಗೆ ಮತ್ತೆ ಅದನ್ನು ವಿಸ್ತಾರವಾಗಿ ಬೋಧಿಸಿ, ಅನೇಕ ಧರ್ಮರಹಸ್ಯಗಳನ್ನು ತಿಳಿಸಿ ಸಮಾಧಾನಪಡೆಸಿದನು. ಅದೇ ಸಮಯದಲ್ಲಿ ಅಶ್ವತ್ಥಾಮನ ಶಸ್ತ್ರದಿಂದ ದಗ್ಧವಾದ ಅಭಿಮನ್ಯುವಿನ ಶಿಶುವನ್ನು, ಶ್ರೀ ಕೃಷ್ಣನು ಪುನಃ ಜೀವಂತಗೊಳಿಸಿ, ಎಲ್ಲರನ್ನೂ ಮುದಗೊಳಿಸಿದನು. ಮತ್ತು ಶ್ರೀಕೃಷ್ಣದ್ವೈಪಾಯನರ ಸಲಹೆಯಂತೆ, ಶ್ರೀ ಕೃಷ್ಣನು ಪಾಂಡವರಿಂದ ಬಹು ಧನ ವ್ಯಯದಿಂದ ಅಶ್ವಮೇಧಯಾಗವನ್ನು ಮಾಡಿಸಿದನು. ಇಂಥ ಶ್ರೀಬ್ರಹ್ಮ-ರುದ್ರೇಂದ್ರಾದಿ ದೇವತೆಗಳಿಗೆ ನಿಯಾಮಕನಾದ್ದರಿಂದ, ಕೇಶವನೆಂಬ ಹೆಸರಿನಿಂದ ಪೂಜ್ಯನಾದ, ಶ್ರೀಕೃಷ್ಣನನ್ನು ಧ್ಯಾನಿಸುತ್ತೇನೆ

ಯದ್ಯುಕ್ತಾಃ ಪಾಣ್ಡುಪುತ್ರಾಃ ಕ್ಷಿತಿಮಥ ಜುಗುಪುಃ ಧರ್ಮರಾಜಸ್ತ್ವರಾವಾನ್
ಧರ್ಮೇ ಯತ್ಪ್ರೀತಯೇಽಭೂತ್ಪವನಜವಚನೈರಾಮ್ಬಿಕೇಯಂ ವಿರಕ್ತಮ್ |
ವ್ಯಾಸಾತ್ಮಾ ಯೋ ವನಸ್ಥಂ ತ್ವಕೃತ ನಿಜಮನೋಽಭೀಷ್ಟವನ್ತಂ ಗತಸ್ತಂ
ನಾಯಂ ಪಾರ್ಥಾನ್ ಸ್ಮರನ್ತೋ ಮುಮುದುರಪಿ ಪದಂ ಯಸ್ಯ ಕೃಷ್ಣಂ ತಮೀಡೇ || 31 ||

ಕೌರವರ ಸಂಹಾರಾನಂತರ ಶ್ರೀಕೃಷ್ಣಪರಮಾತ್ಮನಿಂದ ಸಹಿತರಾದ ಪಾಂಡುರಾಜತನಯರಾದ ಧರ್ಮರಾಜಾದಿಗಳು ಈ ಭೂಮಂಡಲವನ್ನು ರಕ್ಷಿಸಿದರು. ಧರ್ಮರಾಜನು ವಾಯುಕುಮಾರನಾದ ಭೀಮಸೇನನ ವಚನಗಳಿಂದಾಗಿ, ಶ್ರೀ ಕೃಷ್ಣನ ಪ್ರೀತಿಗಾಗಿ, ಧರ್ಮಕಾರ್ಯಗಳಲ್ಲಿ ತ್ವರೆಯುಳ್ಳವನಾದನು. ಶ್ರೀವೇದವ್ಯಾಸರೂಪಿಯಾದ ಶ್ರೀಕೃಷ್ಣನು, ಭೀಮಸೇನನ ವಾಕ್ಯಗಳಿಂದ ವಿರಕ್ತನಾದ, ಧನಾದಿರಹಿತನಾದ, ಅಂಬಿಕೆಯ ಮಗನಾದ ಧೃತರಾಷ್ಟ್ರಮಹಾರಾಜನನ್ನು, ತನ್ನ ಮನೋಭೀಷ್ಟವಾದ ಗಂಧರ್ವಲೋಕಪ್ರಾಪ್ತಿಗಾಗಿ, ತಪಶ್ಚರಣರತನಾಗಿ, ಅರಣ್ಯದಲ್ಲಿರುವಂತೆ ಮಾಡಿ, ಅವನ ಮನೋಬಯಕೆಯು ಸಿದ್ಧಿಸುವಂತೆ ಅನುಗ್ರಹಿಸಿದನು. ಯಾವ ಶ್ರೀ ಹರಿಯ ಪರಮಭಕ್ತರಾದ ಪಾಂಡವರೂ ಕೂಡ, ಪ್ರಭುವಾದ ಶ್ರೀಕೃಷ್ಣಪರಮಾತ್ಮನ ಚರಣಕಮಲಗಳನ್ನು ಸ್ಮರಿಸುತ್ತಾ ಸಂತೋಷಯುಕ್ತರಾದರೋ, ಅಂತಹ ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸುತ್ತೇನೆ.

ಯೋ ಯಷ್ಟ್ವಾ ವಿಪ್ರಶಾಪಾದ್ಯದುಕುಲಮವಧೀತ್ ಅರ್ಥಿತೋऽಗಾತ್ಸ್ವ ಲೋಕಂ
ದೇವೈರ್ಭೈರ್ಷ್ಮ್ಯಾದ್ಯುಪೇತೋ ಯದನು ನಿಜಪದಂ ಪಾಣ್ಡವಾ ಅಪ್ಯವಾಪುಃ ।
ದೈತ್ಯಾ ಯದ್ವೇಷತೋऽನ್ಧೇ ತಮಸಿ ನಿಪತಿತಾ ಬುದ್ಧರೂಪೋऽಭವದ್ಯಃ
ಕಲ್ಕ್ಯಾತ್ಮಾನ್ತೇ ಕಲೇರ್ಯಃ ಕುಜನನಿಧನಕೃತ್ ಪಾತು ಸೋऽಸ್ಮಾನ್ ಸುರೇಶಃ ॥ 32 ॥

ಶ್ರೀಕೃಷ್ಣಪರಮಾತ್ಮನು, ದಿವ್ಯವೂ ಮಂಗಳಕರವೂ ಆದ ಯಜ್ಞವನ್ನು ನೆರವೇರಿಸಿ, ಅನಂತರ ಬ್ರಾಹ್ಮಣರ ಶಾಪದಿಂದ ಯಾದವ ಕುಲವನ್ನು ನಾಶಪಡಿಸಿದವನಾಗಿ, ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥಿತನಾಗಿ, ರುಕ್ಮಿಣೀ, ಸತ್ಯಭಾಮಾ ಮುಂತಾದವರೊಡನೆ ಸಹಿತನಾಗಿ, ತನ್ನದಾದ ವೈಕುಂಠಲೋಕಕ್ಕೆ ದಿಗ್ವಿಜಯ ಮಾಡಿದನು. ಇತ್ತ, ಪಾಂಡುಕುಮಾರರಾದ ಧರ್ಮನಂದಾದಿಗಳೂ ಸಹ, ತಮ್ಮ ತಮ್ಮ ಮೂಲರೂಪದ ಸ್ಥಾನಗಳನ್ನು ಪಡೆದರು. ಶ್ರೀ ಕೃಷ್ಣರೂಪೀ ಹರಿಯ ಮೇಲಿನ ದ್ವೇಷದ ಪರಿಣಾಮವಾಗಿ, ದೈತ್ಯರೆಲ್ಲರೂ ಅಂಧಃತಮಸ್ಸಿಗೆ ತಳ್ಳಲ್ಪಟ್ಟರು. ಅನಂತರ ಶ್ರೀಹರಿಯು, ತನ್ನ ಒಂಬತ್ತನೆಯ ಬುದ್ಧಾವತಾರ ತಾಳಿದನು. ಅದಾದ ಬಳಿಕ ಕಲಿಯುಗದ ಅಂತ್ಯದಲ್ಲಿ ಕಲ್ಕಿಯ ಅವತಾರವನ್ನೆತ್ತಿ, ದುಷ್ಟ ಜನರನ್ನು ಸಂಹಾರ ಮಾಡಿದನು. ಅಂಥ ಬ್ರಹ್ಮರುದ್ರೇಂದ್ರಾದಿ ವೃಂದಾರಕವೃಂದಕ್ಕೆ ಸ್ವಾಮಿಯಾದ, ಶ್ರೀಹರಿಪರಮಾತ್ಮನು, ನಮ್ಮೆಲ್ಲರನ್ನೂ ಕಾಪಾಡಲಿ .

॥ ಇತಿ ಮಹಾಭಾರತತಾತ್ಪರ್ಯನಿರ್ಣಯಭಾವಸಙ್ಗ್ರಹಃ
ರಾಘವೇಂದ್ರ ಯತಿನಾಕೃತಃ ಸಜ್ಜನಸಂವಿದೇ ॥